ಕೊರವಂಜಿ



Koravanji

ಮೇ ೧೯೪೫

ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು :
ಶ್ರೀ ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ|| ಕಾ. ನಾ. ಶೇಷಗಿರಿರಾವ್
ಶ್ರೀ|| ಎಸ್. ವೆಂಕಟೇಶ
ಶ್ರೀ|| ಅನುಮಾನಿ
ಶ್ರೀ|| ಪಾತಾಳಿ
ಶ್ರೀ|| ಖಾರಾಂತ
ಶ್ರೀ|| ಎಸ್. ಪಿ. ರೇವಣ್ಣ
ಶ್ರೀ|| ರುದ್ರಮ್ಮ
ಶ್ರೀ|| ಸೂಲಿಬೆಲೆ
ಶ್ರೀ|| ಕೃಷ್ಣಸ್ವಾಮಿ

ಬಿಡಿ ಪತ್ರಿಕೆ - **ಕೇವಲ ಎರಡಾಣೆ**

ತಿಳಿನಗೆಯ ಮಾಸಪತ್ರಿಕೆ

ಕೊರವಂಜಿ

"ಕೊರವಂಜಿಯು" ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦


—— o ——

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ, ಬಹಳ ಸಹಾಯ ಮಾಡಿದಂತಾಗುವುದು.

—— o ——

ವಿಷಯಾನುಕ್ರಮಣಿಕೆ

	ವಿಷಯ			ಪುಟ
೧.	ಕುಹಕಿಡಿಗಳು	—	—	೧
೨.	ಉರಿಗಾಳು	—	—	೩
೩.	ಕನಸಿನ ಕಥೆ	—	—	೫
೪.	ಸರ್ ಫಯಾಸ್ಕೊ	—	—	೬
೫.	ಜನಸಂದಣಿ ಚಲಿಸಿತು	—	—	೮
೬	ಎಚ್ಚರಿಕೆ	—	—	೯
೭.	ಸಮಸ್ಯೆಗಳು	—	—	೧೧
೮.	ಕೂಶ್ಮಾಂಡ ಪುರಾಣ	—	—	೧೨
೯.	ನವೀನ ಗಾದೆಗಳು	—	—	೧೫
೧೦.	ಬಾಡಿಲೈನ್	—	—	೧೬
೧೧.	ಅನರ್ಥಕೋಶ	—	—	೧೮
೧೨.	ಎರಚ	—	—	೧೯
೧೩.	ದ್ವಾರಪಾಲಕ	—	—	೨೨
೧೪.	ಭಾವಿಗೆ ಬಿದ್ದ ಸಾವಿತ್ರಿಬಾಯಿ	—	—	೨೩
೧೫.	ಬಾಲಬೋಧೆ	—	—	೨೫
೧೬.	ಗೊತ್ತಾಯ್ತೇ ನಾ ಹೇಳಿದ್ದು	—	—	೨೭
೧೭.	ಶಸ್ತ್ರಾಸ್ತ್ರ ಶಾಸನ	—	—	೩೩


ಮುಖದ ಸೌಂದರ್ಯಕ್ಕೆ
FOR THE SKIN
"RAJA" (REGD) SNOW
Removes roughness and makes the skin soft and white and is delicate application for pimples it is used after bath after
"RAJA" (REGD) SNOW
for Beauty & Complexion
MANYAM & CO
MADRAS
ರಾಜಾ ಸ್ನೋ
ಮಣ್ಯಂ ಅಂಡ್ ಕೋ.
ಮದರಾಸು — — ಬೆಂಗಳೂರು

Work Shop Machinery

Lathes, Milling Machines Shapers, Drilling Machines, Capstan & Bench Lathes

Welding Equipments for

Oxy-acetylene and Electric

Rubber Hose

For Suction & Delivery Water, Pneumatic, Oxy-acetylene, Paint Spray

---

Gloves

For Acid & Alkali proof, Electric Resistance, Post Mortem

Sponge, Solid & insertion Sheetings

ANYTHING IN RUBBER


PLEASE ENQUIRE :

TRADES

[TEL: SEDART]

121 SULTANP[illegible]

[illegible]



ಸಂಪುಟ ೪] ಕೊರವಂಜಿ—ಮೇ ೧೯೪೫ [ಸಂಚಿಕೆ ೨

ಕುಹಕಿಡಿಗಳು

ಯೂರೋಪಿನ ಸಂಗ್ರಾಮವು ಮುಗಿಯಿತು. ಜಪಾನಿನ ಸೋಲು ಸ್ವತಃ ಸಿದ್ಧ—

ಅಂದ ಮೇಲೆ ಚರ್ಚಿಲ್ಲರು ನಡೆದಲ್ಲೆಲ್ಲಾ ನಂದನವನವೇ ?

✤ ✤ ✤

ಬೆಳಿಗ್ಗೆ ಎಂಟುಗಂಟೆಯ ಹೊತ್ತಿಗೆ ರಾಯರು ಬುತ್ತಿ ಕಟ್ಟಿಕೊಂಡು ಹೊರಡುತ್ತಿದ್ದರು. ಏನು ರಾಯರೇ ಬುತ್ತಿ ಕಟ್ಟಿಕೊಂಡು ಹೊರಡುತ್ತಿದ್ದೀರಿ. ಯಾವ ಊರಿಗೆ ಎಂದು ಕೇಳಲು— ಯಾವ ಊರಿಗೂ ಇಲ್ಲರೀ ಸೌದೆ ಡಿಪ್ರೋಗೆ ಹೋಗಿ ಸೌದೆ ತರುತ್ತೇನೆ ಎಂದರಂತೆ.

✤ ✤

ಹೀಗೆ ಒಟ್ಟೊಟ್ಟಿಗೆ ಸುದ್ದಿಗಳನ್ನು ಹೇಳಬಹುದೇ ?........

ರೂಸ್‌ವೆಲ್ಟರು ನಿಧನರಾದರು.
ಹಿಟ್ಲರನು ಆತ್ಮಹತ್ಯಮಾಡಿಕೊಂಡನು.
ಸಂಗ್ರಾಮವು ಕೊನೆಗಂಡಿತು.

✤ ✤ ✤

ನಮ್ಮ ದೇಶದ ವಿಜಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ— ಪೆಸಿಫಿಕ್ ಸಂಗ್ರಾಮಾನಂತರ — ಆಚರಿಸುತ್ತಾರಂತೆ.

ಅಮೆರಿಯವರು ಅಗ್ರಾಸನವನ್ನು ವಹಿಸುತ್ತಾರಂತೆ.

✤ ✤ ✤

ಖಾಸಗಿ ಮುಖಂಡರು ಕೆಲವರು ಈಸಾರಿ ಉದಕಮಂಡಲಕ್ಕೆ ಹೋಗಿದ್ದುದು ವ್ಯರ್ಥವಾಯಿತಂತೆ.

ಜೂನ್ ಅಂತ್ಯದ ತನಕ ಯಾವುದೊಂದು ಬದಲಾವಣೆಯೂ ಇಲ್ಲವೆಂದು ಸರಕಾರದವರು ಹೇಳಿಬಿಟ್ಟರಂತೆ—

✤ ✤ ✤

ಶ್ರೀಯುತ ಮುಲಟಾಫ್, ಈರ್ಡ್, ಆಟ್ಲೀಯವರೆಲ್ಲರೂ ಅವರವರ ಊರಿಗೆ ಹೋದರು—

ಸಾನ್‌ಫ್ರಾನ್ಸಿಸ್ಕೊ ಸಮ್ಮೇಳನವು ಈಗ ಯಶಸ್ವಿಯಾಗಿ ನಡೆಯುತ್ತಿದೆಯಂತೆ.

✤ ✤ ✤

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಅಮೇರಿಕಾದ ಪ್ರವಾಸದ ವೈಖರಿಯನ್ನು ಕಂಡು, ಶ್ರೀಮತಿ ದೇವಿಕಾರಾಣಿಯವರೂ ಅಮೇರಿಕಾಗೆ ಹೊರಡುತ್ತಾರಂತೆ.

✤ ✤ ✤

ಪೋಲೆಂಡಿನ ಇತ್ಯರ್ಥದ ವಿಷಯವಾಗಿ ಶಾಂತಿ ಸಂಧಾನವು ಉದ್ವೇಗದಿಂದ ನಡೆಯುತ್ತಿದೆಯಂತೆ.

✤ ✤ ✤

ಸಾನ್‌ಫ್ರಾನ್ಸಿಸ್ಕೋದಲ್ಲಿ ಒಂದು ಸಣ್ಣ ಭೂಕಂಪವು ಸಂಭವಿಸಿತಂತೆ — ಇನ್ನೇನಾದೀತು ಅಲ್ಲಿ,—ಈ ಗಲಭೆಯಲ್ಲಿ—?

✤ ✤ ✤

ವೇವೆಲ್ಲರು ಭಾರತಕ್ಕೆ ಈ ತಿಂಗಳ ಕೊನೆಗೆ ಬರುವರಂತೆ. ಸ್ವಂತ ವಿಜಯೋತ್ಸವದಲ್ಲಿ ಭಾಗಿಯಾಗಿ ನಂತರ ಹಿಂತಿರುಗಬೇಕೆಂದು ಅವರ ಆಶೆಯಂತೆ—

✤ ✤ ✤

ಉರಿಗಾಳು

ಮೊನ್ನೆ ಗವಿಪುರದ ಒಂದು ಮನೆಗೆ ಕನ್ನ ಹಾಕಿ ಕಳ್ಳ ನುಗ್ಗಿದ. ಒಳಗೆ ಪ್ರವೇಶ ಮಾಡಿದಮೇಲೆ ತಿಳಿಯಿತು ಅಲ್ಲಿ ಒಬ್ಬ ಹುಡುಗಿ ಹಾರ್ಮೋನಿಯಂ ಬಾರಿಸು ತ್ತಿದ್ದಳು, ಅನ್ನೋದು. ತಕ್ಷಣವೇ, ಕಳ್ಳ ಕಾಣಿಸಿಕೊಂಡು, "ಪೋಲೀಸಿನವರಿಗೆ ಹೇಳಿ ಕಳುಹಿಸಿ, ಸ್ವಾಮಿ !" ಎಂದು ಹೇಳಿದನಂತೆ.

✦ ✦ ✦

"ನಮ್ಮ ಸಂಸ್ಥೆಗೆ ಸಾವಿರ ರೂಪಾಯಿ ದಾನ ಮಾಡಿದರೆ, ನಾವು ನಿಮ್ಮ ಮರಣಾನ್ತರ ಹದಿನೈದು ದಿನಗಳೊಳಗಾಗಿ ಒಂದು ಸಂತಾಪ ಸಭೆಯನ್ನು ಬಹು ವಿಜೃಂಭಣೆಯಿಂದ ನಡೆಸುತ್ತೇವೆ." ಎಂದು ಮುಂತಾಗಿ ಬೆಂಗಳೂರಿನ ಸಂಸ್ಥೆಯೊಂದು ಪ್ರಕಟಿಸಿ ಹಣ ಶೇಖರಿಸುತ್ತಿದೆ........

✦ ✦ ✦

"ಈ ಸಿನಿಮ ಫಿಲ್ಮನ್ನು ಧರ್ಮ ಸಂಸ್ಥೆಯೊಂದರಲ್ಲಿರುವ ಬಡ ವಿದ್ಯಾರ್ಥಿಗಳಿಗೆ ತೋರಿಸಬೇಕೆಂದಿದ್ದೇನೆ" ಎಂದಾಗ, ಅವರ ಗೆಳೆಯರು ಹೇಳಿದರಂತೆ. "ಕಿವುಡು ಕುರುಡರ ಪಾಠಶಾಲೆಯಲ್ಲಿ ತೋರಿಸಿ" ಎಂದು.

✦ ✦

ನಾಲ್ಕು ಜೊತೆ ಚಪ್ಪಲಿಗಳನ್ನು ಒಟ್ಟಿಗೆ ರಿಪೇರಿ ಮಾಡಿಸಿ ಬಸ್‌ನಲ್ಲಿ ಮನೆಗೆ ತರುತ್ತಿರುವಾಗ, ಅವರನ್ನು ಪ್ರಯಾಣಿಕರೊಬ್ಬರು ಕೇಳಿದರಂತೆ—" ಏನು ? ಸಂಗೀತ ಕಚೇರಿಗೆ ಹೋಗಿದ್ದಿರೇನು ?" ಅಂತ

✦

ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಾಗಿ ರೈಲುಕಂಬಿ ಮೇಲೆ ತಲೆ ಇರಿಸಿಕೊಂಡು ಮಲಗಿದ್ದ ಬಡ ಪ್ರಾಣಿ ಒಬ್ಬ ರೈಲಿಗಾಗಿ ಕಾದು ಕಾದು ಉಪವಾಸದಿಂದಲೇ ಪ್ರಾಣ ಬಿಟ್ಟನಂತೆ.

✦ ✦ ✦

"ನಮ್ಮ ಮಗು ಏನೇನೋ ಮಾತಾಡುತ್ತದೆ. ಒಂದೂ ಖಚಿತವಾಗಿ ಅರ್ಥ ವಾಗುವುದಿಲ್ಲ"....... "ಹೆದರಬೇಡಿ, ತಾಯಿ ! ಮುಂದೆ ಮಂತ್ರಿ ಆಗುತ್ತಾನೆ".

✦ ✦ ✦

ಅರವದವರು ಕನ್ನಡ ಹಾಡುಗಳನ್ನು ಹಾಡುವುದು ಕೇಳಿದಾಗ ನಮಗನ್ನಿಸು ತ್ತದೆ:—" ನಿಜ ! ಸಂಗೀತಕ್ಕೂ ಸಾಹಿತ್ಯಕ್ಕೂ ಏನೂ ಸಂಬಂಧವಿಲ್ಲ", ಅಂತ !

ಬರೀ ಪಂಚ ಪ್ರಾಣಗಳನ್ನು ಹಿಡಿದು ಬದುಕಲು ಎಷ್ಟು ಕಡಮೆ ಖರ್ಚು ಬೀಳುತ್ತದೆ—ಎಂದು ಪತ್ತೆ ಹಚ್ಚಲು ಒಂದು ಸಮಿತಿ ರಚನೆಯಾಗುತ್ತಿದೆಯಂತೆ.... ಇದಕ್ಕೆ ಸಮಿತಿ ಯಾಕೆ? ಪ್ರೈಮರಿ ಸ್ಕೂಲ್ ಮಾಸ್ತರುಗಳ ಸಂಬಳದಷ್ಟು, ಎಂದು ಹೇಳಿದರಾಯಿತು?

✤ ✤ ✤

"ತಿರುಕನೊಬ್ಬ ೪೦೦ ರೂ. ಸಹಿತ ಬೀದಿಯಲ್ಲಿ ಸತ್ತು ಬಿದ್ದಿದ್ದ!"........ ಅಕ್ಕಿ ತರುವುದಕ್ಕೆ ಕರೀಪೇಟೆಗೆ ಹೋಗುತ್ತಿದ್ದನೋ, ಏನೋ, ಪಾಪ!

✤ ✤ ✤

ಚರ್ಚಿಲ್‌ನ ಹೊಗಳಿಕೆ ಹಾಗಿರಲಿ, ಅವನ ಹೆಸರೂ ಕೂಡ ಇಲ್ಲದ ಏಕಮಾತ್ರ ಗ್ರಂಥವಾದ ಬೈಬಲನ್ನು ಈಗ ಅನೇಕ ಇಂಗ್ಲೀಷಿನವರು ಅದಕ್ಕೋಸ್ಕರವಾಗಿಯೇ ಓದುತ್ತಿರುವರಂತೆ.

✤ ✤ ✤

ಶ್ರೀ ವಿಜಯಲಕ್ಷ್ಮಿ ಪಂಡಿತರ ಪ್ರಯತ್ನದಿಂದ, ಅಮೇರಿಕಾದ ಹಲವು ನಗರಗಳಲ್ಲಿ ನೀಗ್ರೋ ಜನರು ಅನುಭವಿಸುತ್ತಿದ್ದ ಬಹಿಷ್ಕಾರ ಮುಂತಾದ ಹಿಂಸೆ ಮಾಯವಾಗುತ್ತಿದೆ........ಸರಿ! ಇಲ್ಲಿ ಹರಿಜನೋದ್ಧಾರ, ಅಲ್ಲಿ ಕರಿಜನೋದ್ಧಾರ.

✤ ✤ ✤

ಲಾರ್ಡ್ ಲಿನ್‌ಲಿತ್‌ಗೋರವರ ಮಗ ಕಾಮನ್ಸ್ ಸಭೆಗೆ ಉಮೇದುವಾರನಾಗಿ ನಿಲ್ಲುವನಂತೆ........ಎಳೆಗರು ಎತ್ತಾಗದೇ?

✤ ✤ ✤

ಪ್ರಮುಖರು: ಏನ್ರಿ! ನಿಮ್ಮ ಪೇಪರಿಗೂ ನನಗೂ ಬದ್ಧದ್ವೇಷ ಇದ್ದ ಹಾಗಿದೆಯಲ್ಲಾ.

ಸಂಪಾದಕರು: ಛೆ! ಛೆ! ಏನೂ ಇಲ್ಲ ಸಾರ್! ಯಾಕೆ ಹೇಳಿ!

ಪ್ರಮುಖರು: ನನ್ನ ಭಾಷಣಾನ ನೀವು ಹಾಕಲೇ ಇಲ್ಲ.

ಸಂಪಾದಕರು: ದ್ವೇಷವಿಲ್ಲ ಅನ್ನೋದಕ್ಕೆ, ಅದೇ ಸಾರ್ ಗುರುತು.

✤ ✤

ಗುಮಾಸ್ತೆ: ನಾಳೆ ಲೀವ್ ಬೇಕು, ಸಾರ್! ಹೆಂಡತಿ ಮಕ್ಕಳನ್ನು ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಹೋಗಬೇಕು.

ಸಾಹೇಬರು: ಆಗೋದಿಲ್ಲಯ್ಯ, ಹೋಗಾಚೆ, ಲೀವೂ ಇಲ್ಲ, ಗೀವೂ ಇಲ್ಲ.

ಗುಮಾಸ್ತೆ: ತುಂಬಾ ಥ್ಯಾಂಕ್ಸ್, ಸಾರ್.

✤ ✤ ✤

ಕನಸಿನ ಕಥೆ

ಒಂದು ದಿನ ಸಂಜೆಯಲಿ ।
ಬಂದಿರಲು ನಾಮನೆಗೆ ।
ಬಂದು ನಿಂದಳು ನಲ್ಲೆ ।
ಎದುರಿನಲ್ಲಿ ॥ ೧ ॥

ಎಂದು ಇಲ್ಲದ ಸೊಗಸು ।
ಇಂದೇನು ? ಎನೆ ನಾನು ।
ಹಿಂದೆ ಸರಿದಳು ನಲ್ಲೆ ।
ಮುನಿಸಿನಿಂದಾ ॥ ೨ ॥

ನಗುವ ತುಟಿಗಳು ಅಲುಗೆ ।
ನಗುವ ಕಣ್ಣಿನ ಕಳೆಯ ।
ಮುಗುಳಿನಲಿ ಎನ್ನನೋಡಿ ।
ನಲುವಿನಿಂದಾ ॥ ೩ ॥

ನೋಡಿ ನಮ್ಮೂರಿಂದ ।
ನಾಡಿದ್ದು ಬಾರೆಂದು ।
ಬೇಡಿ ಬರೆದಿಹರಿಲ್ಲಿ ।
ಈ ಕಾಗದಾ ॥ ೪ ॥

ಎಂದು ನಸುನಗುತಲ್ಲಿ ।
ಬಂದು ಹತ್ತಿರಕಾಗ ।
ತಂದು ಕೊಟ್ಟಳು ಅದನು ।
ಬೆಡಗಿನಿಂದಾ ॥ ೫ ॥

ಕಾಗದವ ನಾ ತೆಗೆದು ।
ಬೇಗಬೇಗನೆ ಓದಿ ।
ಮೊಗವ ನೋಡುತಲಿದ್ದ ।
ಅವಳ ಕಂಡು ॥ ೬ ॥

ಬೇಡ ಹೋಗುವುದೆನಲು ।
ಅಡರಿದುದು ನಸುಕೋಪ ।
ಬಿದ್ದುದೊಂದೆರಡಲ್ಲಿ ।
ಕಣ್ಣಹನಿಯೂ ॥ ೭ ॥

ನಿನ್ನ ಬಾರೆಂದಿಹರು ।
ನನ್ನ ಸುದ್ದಿಯೆ ಇಲ್ಲ ।
ನಿನ್ನೊಬ್ಬಳನೆ ಕಳಿಸ ।
ಲಾಗದೆನಲು ॥ ೮ ॥

ದೂರಸರಿದಳು ಎದ್ದು ।
ಹಾರಿದುದು ತುಟಿಕೆಂಪು
ಸಾರಿದುದು ಕೆನ್ನೆಗೆ ।
ಕೋಪದಿಂದಾ ॥ ೯ ॥

ನಿನ್ನ ಬಿಟ್ಟಿರಲಾರೆ ।
ಎನ್ನ ಬಾ ಎಂದಿಲ್ಲ ।
ನಿನ್ನ ತವರಿಗೆ ಎನಲಿ ।
ಪ್ರೀತಿ ಇಲ್ಲಾ ॥ ೧೦ ॥

ಎಂದಮಾತನು ಕೇಳಿ ।
ಮುಂದೆ ಸರಿದಾ ಅವಳ ।
ಹಿಂದಕೇನಿಲ್ಲಿಸಲು ।
ಕೈಯ ಹಿಡಿದೂ ॥ ೧೧ ॥

‘ ಚಿನ್ನ ಕೋಪಿಸಬೇಡ ’ ।
ಎನಲು ನಾ ಒಲವಿನಲಿ ।
‘ ಏನುಮಾತಿದು ನಿಮಗೆ ।
ನಿದ್ದೆಯಲ್ಲೂ ? ॥ ೧೨ ॥

ಎನಲವಳು ಪಕ್ಕದಲಿ ।
ನಾನೆದ್ದೆ ನಿದ್ದೆಯಿಂ ।
ಕನಸ ಹೇಳಲು ನಾನು ।
ನಕ್ಕು ಮಲಗಿದಳು ॥ ೧೩ ॥

—ಶಾ.ನಾ ಶೇಷಗಿರಿರಾವ್.

ಸಣ್ ಫಯಾ ಸ್ಕ್ರೊ

———o———

" ಮುಟ್ಟಬೇಡ ಅದನ್ನ - ವಿಮಲ - ನಾನು ಕೀಲು ಕೊಡುತ್ತೇನೆ ;'

" ನೀನುದೂರ ಕೂತುಕೊಳ್ಳೆ - ಲಲಿತೆ - ಮುರಿದು ಹಾಕಿಬಿಡ್ತಿ ನೀನು"

"ಲೋ ಚೇಚು. ಆ ಕೈಮರ ಯಾಕೆ ಮುಟ್ಟುತ್ತೀಯೋ - ನಿನಗೆ ಹೇಳಲಿಲ್ಲವೆ ಆಗಲೇ ದೂರ ಕೂತುಕೊಂಡು ನೋಡು ಅಂತ."

ರೇಗಿ ಬೀಳುತ್ತಾ ಇದ್ದಾರೆ - ಶಿವಣ್ಣನವರು. ಕಾರಣ - ಇಂದು ಅವರು ಒಂದು ರೈಲು ಇನ್ಜಿನ್ ಇತ್ಯಾದಿ ಆಟದ ಸಾಮಾನಿನ ಒಂದು ಪೆಟ್ಟಿಗೆಯನ್ನು ಯುದ್ಧನಿಧಿ ಲಾಟರಿಯಲ್ಲಿ, ಬಹುಮಾನ ಪಡೆದು ತಂದಿದ್ದರು. ಶಿವಣ್ಣನೂ ಆತನ ತಮ್ಮ ಶಂಕಣ್ಣನೂ ಅದನ್ನು ಜೋಡಿಸಿಟ್ಟು, ರೈಲು ಜುಗು ಜುಗು ಎಂದು ಕೀಲಿ ಕೊಡಿಸಿಕೊಂಡು ಓಡುವುದನ್ನು ನೋಡುತ್ತಾ ಇದ್ದಾರೆ. ಸುತ್ತಲೂ ಹುಡುಗ ರೆಲ್ಲರೂ ಕುಳಿತಿದ್ದಾರೆ. ಚೇಚುವಿಗೆ ಆರುವರ್ಷ ಆ ಕೈಮರದ ಮೇಲೆ ಕಣ್ಣು, ಕೆಂಪು ಗಾಜು ಕಾಣಿಸಲೇಬೇಕು ಎಂದು, ಲಲಿತೆಗೆ ಮೂರು ವರ್ಷ, ಆಗಲೇ ಇಂಜಿನ್ನಿನ ಮೇಲೆ ಕಣ್ಣು. ಇಂಜಿನ್ನೊಳಗೆ ಒಬ್ಬ ಸವಾರ ಕೂತಿದ್ದ- ಅವನಿಗೆ ಒಂದು ತರಹ ಟೋಪಿ, ಕ್ರಾಪಿನ ಮರಿ ಇದ್ದಂತೆ - ಅವನಮೇಲೆ ಲಲಿತೆಯ ಕಣ್ಣು. ರೈಲು ಕಂಬಿಯಮೇಲೆ ಕೈಯಾಡಿಸಬೇಕು, ಎಷ್ಟು ನುಣುಪಾಗಿದೆ ಎಂದು ವಿಮಲನ ಹಂಬಲ. ವಿಮಲನಿಗೆ ಹತ್ತು ಹನ್ನೆರಡು ವರ್ಷ. ಜಾರುವ ವಯಸ್ಸು. ಕಂಬಿ ಕೀಳಬೇಕೆಂಬ ಆಶೆ. ರೈಲಿನ ಕಂಬಿಮೇಲೆ ಬೆರಳಾಡಿಸಬೇಕು ಎಂಬ ಚಪಲ.

ತಂದೆ ಚಿಕ್ಕಪ್ಪಂದಿರು ಈ ಹುಡುಗರು ಏನೂ ಹಾಳುಮಾಡಬಾರದೆಂದೂ, ತಾವೇ ಎಲ್ಲವನ್ನೂ ಸರಿಯಾಗಿ ಕೂಡಿಸಿ ರೈಲು ಡಬ್ಬಿಯನ್ನು ಓಡಿಸಿ ಸಂತೋಷ ಪಟ್ಟು, ಬಂದವರಿಗೆ ತಮ್ಮ ಹುಡುಗರೇ ಇದನ್ನೂ ಮಾಡಿ ಕೂಡಿಸಿದರೆಂದು ಹೇಳ ಬೇಕೆಂಬ ಚಪಲ ಮಕ್ಕಳೇ ಎಲ್ಲಿ ಕೈಹಾಕಿ ಯಾವುದಾದರೂ ಒಂದು ಭಾಗವನ್ನು ಕೆಡಿಸುತ್ತಾರೋ ಎಂಬ ಭಯ. ಹಾಗಾಗಿ ಹೀಗೆ ಮಕ್ಕಳಮೇಲೆ ರೇಗಾಡುತ್ತ ಕೂಗಾಡುತ್ತ ರೈಲಿನ ಜೋಡಣೆಯನ್ನು ಮಾಡುತ್ತಿದ್ದರು ರೈಲೂ ಓಡುವ ಸ್ಥಿತಿಗೆ ಬಂದಿತ್ತು

ಅಷ್ಟು ಹೊತ್ತಿಗೆ ವಿಮಲ ಅಳುಮುಖ ಮಾಡಿಕೊಂಡು ಅಮ್ಮನ ಹತ್ತಿರ ಓಡಿ ಹೋದಳು. ಲಲಿತೆ ಅವಳ ಹಿಂದೆ ಅಳುತ್ತಾನೇ ಓಡಿಹೋದಳು. ಚೇಚು, ಅತ್ತೂ ಅಳದ ಹಾಗೆ ಮೂಗನ್ನು ಬಾಯಿಯ ತುದಿಗೆ ತಂದುಕೊಂಡು ಹಿಂದು ಹಿಂದಕ್ಕೇ ತಾಯಿಯ ಹತ್ತಿರ ಸರಿದುಹೋದ.

ಒಳಗೆ ಹೋಗಿ, "ಅಮ್ಮಾ ? ಅಪ್ಪಾ ಚಿಕ್ಕಪ್ಪ ಇಬ್ಬರೇ ರೈಲಾಟ ಎಲ್ಲಾ ಆಡುತ್ತಿದ್ದಾರೆ. ಮಕ್ಕಳಿಗೆ ಎಂದು ತಂದು, ನಮ್ಮನ್ನು ಅದರ ಹತ್ತಿರಾನೂ ಬಿಡೋಲ್ಲ" ಎಂದು ಚಾಡಿ ಹೇಳುತ್ತಿದ್ದಾರೆ.

✦ ✤ ✦

ಇದೆಲ್ಲವನ್ನೂ ಶಿವಣ್ಣ ನನಗೆ ಮಾರನೆಯ ದಿನ ಹೇಳಿದ "ನೋಡೋ ರಾಶಿ! ನಮ್ಮ ನಮ್ಮ ದೊಡ್ಡವರ ಚಪಲದಲ್ಲಿ - ಆಟದಲ್ಲಿ - ಹುಡುಗರ ಆಟಕ್ಕೂ ಕಲ್ಲು ಹಾಕುತ್ತೇವೆ. ನಮ್ಮ ಹುಡುಗರೆಲ್ಲಾ ಅವರಮ್ಮನ ಹತ್ತಿರ ಚಾಡಿ ಹೇಳಿಕೊಳ್ಳುತ್ತಿದ್ದರು. ಕೇಳಿದಮೇಲೆ ನಾನು ಅದನ್ನೆಲ್ಲಾ ಅವರಿಗೇ ಬಿಟ್ಟು ಅವರೇ ಕಟ್ಟಿ ಓಡಿಸಿ ಆಟವಾಡಿಕೊಳ್ಳಲಿ ಎಂದು ಸುಮ್ಮನಾದೆ" ಎಂದ.

"ಹೌದು ಶಿವಣ್ಣಾ, ಆದರೆ ಇದನ್ನು ಸಣ್ ಫಿಯಾಸ್ಕೊ ಎಂದು ಏಕೆ ಹೇಳಿದೆ?" ಎಂದು ಕೇಳಿದೆ.

"ಮತ್ತೇನೊ ಇಲ್ಲ ರಾಶಿ, ಆದರೆ ನೋಡು, ಈ ಫಿಯಾಸ್ಕೊ ಸಮ್ಮೇಳನ ಜ್ಞಾಪಕಕ್ಕೆ ಬಂತು ಅಷ್ಟೆ. ಅದಕ್ಕೆ ಹೀಗಂದೆ. ಅಲ್ಲೂ ಹೀಗೆ ಚಿಲ್ಲರೆ ಚಿಲ್ಲರೆ ರಾಷ್ಟ್ರಗಳು, ನಮ್ಮ ಮಕ್ಕಳಂತೆಯೇ ಅಬಲರಾದವರು, ಎಲ್ಲರೂ ಭಾಗಿಗಳು, ಎಲ್ಲರೂ ಸದಸ್ಯರು, ಆದರೆ ನಮ್ಮಂತೆ ದೊಡ್ಡವರಾದವರು ಕೆಲವರು ಸೇರಿಕೊಂಡು ತಮ್ಮ ತಮ್ಮ ಆಟವನ್ನು ತಾವು ಆಡುವವರೇ ವಿನಹಾ ಮಕ್ಕಳಿಗೆ ಒಂದು ಅವಕಾಶವನ್ನೂ ಕೊಡುವುದಿಲ್ಲ. ಆದರೆ ಎಲ್ಲರೆದುರಿಗೆ ಮಾತ್ರ ಮಕ್ಕಳೇ ಇದನ್ನೆಲ್ಲಾ ಜೋಡಿಸಿದ್ದು. ಅವರ ಸಂತೋಷಕ್ಕೇ ಅವರ ಖುಷಿಗೇ ಈ ಆಟ ಎಂದು ಹೇಳಿಕೊಳ್ಳುತ್ತಾರೆ. ಈ ಸಣ್ ಫಯಾಸ್ಕೊ ಸಮ್ಮೇಳನ ನಮ್ಮ ಆಟದಂತೆ ಅಲ್ಲವೇ— ಅದಕ್ಕೇ ಸಣ್ ಫಯಾಸ್ಕೊ ಎಂದು ಹೇಳಿದೆ—ಅಲ್ಲಿ ಆಗುವುದು ದೊಡ್ಡ ಫಯಾಸ್ಕೊ" ಎಂದ

— ನನಗೇನೋ ಒಂದೂ ಅರ್ಥವಾಗಲಿಲ್ಲ ಅನ್ನಿ —

"ಮೊನ್ನೆ ನಾನು ಬೆಂಗಳೂರು ಬಸ್ಸೊಂದರಲ್ಲಿ ತಳದಲ್ಲೇ ಕೂರಬೇಕಾಯಿತು. ಒಬ್ಬರೂ ನನಗೆ ಜಾಗ ಕೊಡಲಿಲ್ಲ. ನಿರಾಶನಾಗಿ ಕಾಲು ಅಡಗಿಸಿಕೊಂಡು ಕೂತ ಮೇಲೆ ಒಬ್ಬರು ಪುಣ್ಯಾತ್ಮರು, "ಸ್ವಾಮಿ" ಅಂತ ನನ್ನನ್ನು ಕೂಗಿ, "ಕೊಳ್ಳಿ" ಅಂತ....ನನಗೆ ಕೂರಲು ಒಂದು ಪೇಪರ್ ಕೊಟ್ಟರು." (ಬಾತ್ಮಿ)

ಜನಸಂದಣಿ ಚಲಿಸಿತು

ಬಾಗಿಲ ಮುಂದೆ ಪ್ರಚಂಡವಾದ ಜನಸಂದಣಿ ನೆರೆದಿದ್ದಿತು.—

ಮೇಲುಪ್ಪರಿಗೆಯೊಳಗಿಂದ ರೋದನದ ಸ್ವರವು ಕರ್ಕಶವಾಗಿ ಕೇಳಬರುತ್ತಿದ್ದಿತು.

ದಾರಿಹೋಕರೆಲ್ಲರೂ ಬೀದಿಯಲ್ಲಿ ನಿಂತುಕೊಂಡು ವಿಚಾರಣೆ ಮಾಡುತ್ತಿದ್ದರು. ಮೇಲುಪ್ಪರಿಗೆಯ ಮೇಲೆ ನಿನ್ನೆಯದಿನವೇ ಹೊಸ ಬಾಡಿಗೆಯವರು ಬಂದಿದ್ದಕಾರಣ ಹೀಗೆ ಯಾವದಾದರೂ ಅನಪೇಕ್ಷಿತ ಪ್ರಕರಣ ಘಟಿಸಬಹುದೆಂಬ ಕಲ್ಪನೆ ಯಾರಿಗೂ ಇದ್ದಿರಲಿಲ್ಲ.

ಹೊರಗೆ ಜನಸಂದಣಿಯು ಅಧಿಕವಾಗತೊಡಗಿತು.

ನಡುರಸ್ತೆಯಲ್ಲಿ, ನಡು ಮಧ್ಯಾನ್ಹದಲ್ಲಿ ಹೊಡೆದಾಟ ?

ಅನೇಕರಿಗೆ ಈ ಪ್ರಕರಣ ಸರಿಬೀಳಲಿಲ್ಲ.

ಎಷ್ಟೋ ಕೀಳುಜಾತಿಯವರು, "ಅಬ್ಬಬ್ಬಾ, ಈ ಬ್ರಾಹ್ಮಣರೂ ಸಹ ನಮ್ಮಂತೆಯೇ ಇರುವರಲ್ಲ. ನಡುಮಧ್ಯಾನ್ಹದಲ್ಲಿ ನಾಚಿಕೆಯಿಲ್ಲದೆ ಹೊಡೆದಾಡಿ ಕೊಂಡು ಅಳುತ್ತಿರುವರಲ್ಲ." ಎಂದು ಹಾಸ್ಯ ಮಾಡುತ್ತಾ ಮುಂದೆ ಸಾಗುತ್ತಿದ್ದರು.

ಒಬ್ಬ ಮುಂದಾಳು ಪೋಲೀಸರಿಗೆ ವರದಿ ಕೊಡಬೇಕೆಂದೂ ಹೇಳಿದನು. ಅಷ್ಟರಲ್ಲಿ ಮೇಲುಪ್ಪರಿಗೆಯಿಂದ ಒಬ್ಬ ಸಭ್ಯಗೃಹಸ್ಥನು ಒಳ್ಳೇ ಪೋಕ್ತತೆಯಿಂದ ಕೆಳಗೆ ಇಳಿದು ಬಂದನು.

'ಏನ್ರೀ ನಡು ಮಧ್ಯಾನ್ಹದಲ್ಲಿ ಹೀಗೆ ಬಡಿದಾಟವೇ ? ಈ ವೇಳೆಯಲ್ಲಿಯೇ ಇಷ್ಟು ಕೋಪಕ್ಕೆ ಹೋದರೆ ರಾತ್ರಿ ಏನಾಗುವುದು ?"

ಒಬ್ಬನು ಆ ಸಭ್ಯಗೃಹಸ್ಥನಿಗೆ ದಿಟ್ಟತನದಿಂದ ಕೇಳಿದನು. "ಏನಾದರೂ ನಾಚಿಕೆ........" ಆ ಗೃಹಸ್ಥನು ಶಾಂತಿ ರೀತಿಯಿಂದ ಮರು ಪ್ರಶ್ನೆ ಮಾಡಿದನು.

"ಹಾಗಾದರೆ ಮೇಲೆ ಹೀಗೇಕೆ ರೋದನ ನಡೆದಿದೆ ? "

"ಇದು Music Class (ಗಾಯನ ವಿದ್ಯಾಲಯ) ಇದೆ — ನಾಳಿನ ದಿವಸ Board ಹಚ್ಚಲಾಗುವದು-ಸದ್ಯಕ್ಕೆ ಮೇಲೆ ಗಾಯನ ನಡೆದಿದೆ." ಸಭ್ಯ ಗೃಹಸ್ಥನು ಸಭ್ಯರೀತಿಯಿಂದ ಉತ್ತರ ಕೊಟ್ಟನು. ಅವನ ಮಾತುಕೇಳಿ ಜನಸಂದಣಿ—ಚಲಿಸಿತು.

— ಎಸ್. ವೆಂಕಟೇಶ.

ಎಚ್ಚರಿಕೆ

ಯುದ್ಧಾನಂತರದಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಸಾವಿರಾರು ಪುಟಗಳ ಯೋಜನೆಗಳನ್ನು ತಯಾರಿಸಿ ತಲೆಕೆಡಿಸಿಕೊಳ್ಳುತ್ತಿರುವ ಪುಣ್ಯಾತ್ಮರಿಗೆ "ನಿಮ್ಮ ಪುಸ್ತಕಗಳನ್ನು ಟೆಕ್ಸ್ಟ್ ಬುಕ್ಕುಗಳಾಗಿಟ್ಟರೇನಾದರೂ ಪ್ರಯೋಜನವುಂಟು" ಎಂದು ಹೇಳುವ ಕಾಲ ಬಂದಿದೆ. ಏಕೆಂದರೆ, ಯುದ್ಧಕಾಲದ ನಮ್ಮ ಅನುಭವದಿಂದ ನಾವು ಯುದ್ಧಾನಂತರ ಯಾವ ಕೈಗಾರಿಕಾ ಪದಾರ್ಥವನ್ನೂ ಅಪೇಕ್ಷಿಸುವ ಹಾಗಿಲ್ಲ ಎಂಬುದನ್ನು ಈ ಪಂಡಿತವರೇಣ್ಯರು ಮನಗಂಡಿಲ್ಲ. ಪಟಾಕಿ ಇಲ್ಲದ ದೀಪಾವಳಿ, ಕರ್ಪೂರವಿಲ್ಲದ ಮಂಗಳಾರತಿ, ಬೆಣ್ಣೆಯಿಲ್ಲದ ಭೇಟಿ, ಸಿಗರೇಟಿಲ್ಲದ ಬಾಯಿ, ಫೋಟೋ ಇಲ್ಲದ ವಾರ್ಷಿಕೋತ್ಸವ, ರವೆಕೇಸರಿತುಪ್ಪ ಇಲ್ಲದ ಕೇಸರೀ ಭಾತ್, ಕಾರಿಲ್ಲದ ವರಪೂಜೆ, ನಂಟರಿಲ್ಲದ ದಸರಾ, ನಿಜವೇ ಇಲ್ಲದ ಪೇಪರು, ಕಥೆಯಿಲ್ಲದ ಕಾದಂಬರಿ, ಕರ್ನಾಟಕ ಸಂಗೀತವೇ ಇಲ್ಲದ ಕನ್ನಡ ಚಲನ ಚಿತ್ರ,— ಇವೆಲ್ಲ ನಮಗೆ ಕರತಲದ ಕಜ್ಜಿಯಾಗಿವೆ. ಕಾಗದದ ಒಂದೇ ಕಡೇ ಬರೆಯಿರಿ ಎಂದು ಸಂಪಾದಕರು ಹೇಳಿದರೆ ಯಾವಕಡೆಯೂ ಬರೆಯದೆ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಲು ನಾವು ಕಲಿತು ಬಿಟ್ಟಿದೇವೆ. ದಮಯಂತಿಯ ಹಾಗೆ ನಮ್ಮ ಹೆಣ್ಣುಮಕ್ಕಳು ಪತ್ರೆಯಮೇಲೆ ಬರೆದು ಪ್ರೀತಿ ಪಾತ್ರರಿಗೆ ತಲಪಿಸುವ ಕಾಲ ಮತ್ತೆ ಬಂದಿದೆ. ನೆಲ್ಲನ್ನೇ ಬೇಯಿಸಿ ತಿನ್ನಲು ಅಭ್ಯಾಸ ಮಾಡಿಕೊಂಡಿದ್ದೇವೆ. ಸೌದೆ ಅಭಾವದಿಂದ ಬೇಯಿಸದೆ ತಿನ್ನುವುದಕ್ಕೂ ಸಾಧ್ಯ. ಕಲ್ಲು, ಮಣ್ಣು ಕೂಡ ಸಮಯಕ್ಕೆ ಒದಗುತ್ತವೆ. ನೀರನ್ನು ಹಾಲು ಅಂತ ಹೊಗಳಿ ಏನೂ ಅರಿಯದ ಮಕ್ಕಳಿಗೆ ಕುಡಿಸುತ್ತಿದ್ದೇವೆ. ಹೆಬ್ಬೆಟ್ಟೂರಲು ಜಾಗ ಸಿಕ್ಕರೆ ಸಾಕು, ನೂರಾರು ಮೈಲಿ ರೈಲು ಪ್ರಯಾಣಮಾಡಬಲ್ಲೆವು. ಎಂಥಾ ಮಿಚೆಲಿನ್ ಚಕ್ಕಳವನ್ನಾದರೂ ಅಗಿದು ನುಂಗಲು ಹಲ್ಲಿಗೆ ಬಲ ಬಂದಿದೆ. ಕ್ವಿನೀನಿಲ್ಲದೆ ಮಲೇರಿಯಾ ರೋಗಿಗಳಿಗೆ ಔಷಧಿ ಕೊಡಲು ವೈದ್ಯರು ಕಲಿತಿದಾರೆ. ಪೆನ್‌ಸಿಲಿನ್ ನಮ್ಮಲ್ಲೇ ಇದೆ ಎಂದು ಆಯುರ್ವೇದ ಪಂಡಿತರು ಹೇಳ ಹತ್ತಿದ್ದಾರೆ. ಪೇಟ, ರುಮಾಲು ಯಾವುದೂ ನಮಗೆ ಬೇಡವಾಗಿದೆ. ಜನ್ಮ ಜನ್ಮಾಂತರಕ್ಕೂ ನಮ್ಮ ತಲೆಮೇಲೆ ಪರಂಗಿಯವರ ಟೋಪಿಯೇ ಇರಲಿ ಎಂದು ಅನೇಕರಿಗೆ ಅನ್ನಿಸಿಬಿಟ್ಟಿದೆ. ಸೆಕ್ರಟೇರಿಯೆಟ್ ಜವಾನರಿಗೆಲ್ಲ ಜರೀ ರುಮಾಲೆ ಯೂನಿಫಾರಂ ಆದಮೇಲೆ, ಸಾಹೇಬರು ಯಾರುತಾನೇ ಜರೀ ಅಂತ ಮೆರೆಯುತ್ತಾರೆ ? ಬರೀ ಷರ್ಟಲ್ಲೇ ಇಷ್ಟು ದಿವಸ ಓಡಾಡಿದ ನಾವು ಯುದ್ಧ ಮುಗಿಯಿತು ಅಂದಮಾತ್ರಕ್ಕೆ ಅಂಗಿಯೊಳಕ್ಕೆ ಸೇರಿಕೊಳ್ಳುತ್ತೇವೆಯೇ ? ಸುಳ್ಳು ! ಟೈ, ಸ್ಟಾಕಿಂಗ್ಸ್, ಷೂಸ್ — ಇವಂತೂ ನೆಗೆದುಬಿದ್ದು ಹೋಯಿತು, ಸೊಟ್ಟನೆಯ ಹ್ಯಾಟೊಂದು, ಓಪನ್ ಷರ್ಟೊಂದು, ಷರಾಯಿ, ಚಪ್ಪಲಿ— ತೀರಿಹೋಯಿತು ಗಂಡಸಿನ ಮಾನ ಮುಚ್ಚುವ ಏರ್ಪಾಟು. ಬೇಕಿದ್ದರೆ ಮೂಗಿನ ಬುಡದಲ್ಲಿ ಒಂದಿಷ್ಟು ಮೀಸೆ ! ಬ್ಲೇಡಿಲ್ಲದೆ ಮುಖಕ್ಷೌರಮಾಡಿಕೊಳ್ಳುವುದಕ್ಕೆ ಬೇರೆ ಅಭ್ಯಾಸ ಮಾಡಿಕೊಂಡಿದೇವೆ, ಭೂಪತಿ ರಂಗಂದಿರು.

ಎಂಟು ಷರಾಯಿ ಬೇಕಾಗಿದ್ದವರಿಗೆ ಏಳೇ ಸಾಕು ಅನ್ನಿಸಿದೆ; ಏಳಿದ್ದವರಿಗೆ ಆರು; ಆರಿದ್ದವರಿಗೆ ಐದು, ಐದಿದ್ದವರಿಗೆ ನಾಲ್ಕು! ನಾಲ್ಕಿದ್ದವರು ಹೇಗೋ ಮೂರರಿಂದಲೇ ಮ್ಯಾನೇಜು ಮಾಡುತ್ತಿದ್ದಾರೆ; ಹೀಗೆ ಉದ್ದಕ್ಕೂ.... ಇಂತಹ ಜಾಣತನವನ್ನು ಆರೇಳು ವರ್ಷಗಳಿಂದ ಕಲಿತ ನಲವತ್ತು ಕೋಟಿ ಭಂಡಪಿಂಡಗಳಿಗೆ, ಸಂಪದಭಿವೃದ್ಧಿ! ವ್ಯವಸಾಯ ಕ್ರಾಂತಿ! ಕೈಗಾರಿಕಾ ಶಿಖರ! ಬೆವಿನ್ ಬಾಯ್ಗಳ ಜಮಾವಣೆ! ದಲಾಳ್ ಧಾಂಡಿಗರ ಧೋರಣೆ!........ ಹುಚ್ಚು! ಹುಚ್ಚು!....ಆ?

"ಅನುಮಾನಿ"

—o—

ಹಿಟ್ಲರನು ಅಷ್ಟುಸಾರಿ ಸತ್ತಮೇಲೂ ಐರ್ಲೆಂಡಿಗೆ ಹೋಗಿ ನೆಲೆಸಿದ್ದಾನೆಂಬ ಸುದ್ದಿ ಇನ್ನೂ ಮುಗಿದಿಲ್ಲವಂತೆ.

✤ ✤ ✤

ಇಂದು ಶಾಂತಿ ವಾತಾವರಣವು ಜ್ಯೂನಲ್ಲಿ ಏರ್ಪಟ್ಟಿದೆಯಂತೆ—

ಸಾಮ್ರಾಜ್ಯ ಶಾಹಿ ಸಿಂಹವು ಗರ್ಜಿಸುತ್ತಿದೆಯಂತೆ.
ಕಾರ್ಮಿಕ ಮುಖಿ ತೋಳವು ಕೋರೆದಾಡೆಗಳನ್ನು ತೋರಿಸುತ್ತಿದೆಯಂತೆ
ಡಾಲರ ದೈವೀ ಹದ್ದಾಗಲೇ ರೆಕ್ಕೆ ಬಡಿಯುತ್ತಿದೆಯಂತೆ.
ಸಹನಾದೇಹೀ ಡ್ರಾಗನ್ನೂ ಹರಿದಾಡುತ್ತಿದೆಯಂತೆ.
ಅಚಲದೇಹೀ ಆನೆಯು ಮಾತ್ರ ಅಚಲಿತವಾಗಿದೆಯಂತೆ.

✤ ✤ ✤

ಉರ್ದುವಿನಲ್ಲಿ ಒಂದು ಗಾದೆ ಇದೆಯಂತೆ

ಹಾತೀಕಾ ದಾಂತ್ — ಖಾನೇಕು ಔರ್
ದಿಖಾನೇಕು ಔರ್ ಎಂದು.

ಆನೆಯ ಹಲ್ಲು — ತಿನ್ನಲಿಕ್ಕೊಂದು
ತೋರಿಸಲಿಕ್ಕೊಂದು ಎಂದು.

— ಚುನಾವಣಾ ಭಾಷಣಗಳಿದ್ದಂತಲ್ಲವೇ?

ಆಫ್ರಿಕಾದಲ್ಲಿ ಗಾಂಧಿ ಟೋಪಿ ಹಾಕಿಕೊಂಡು ಹೋಗುತ್ತಿದ್ದವನೊಬ್ಬನನು ಆಂಗ್ಲೇಯನೊಬ್ಬನು ಹಾದಿಯಲ್ಲೇ ಹೊಡೆದು ಟೋಪಿ ನೆಲಕ್ಕೆಸೆದನಂತೆ.

—ನಂತರ ನಾವಿಕನ ಟೋಪಿ ಅದು ಎಂದು ಗೊತ್ತಾಯಿತಂತೆ.

✤

ಭೂಮ್ಯಾತುರಾಣಾಂ ನಭಯಂ ನಲಜ್ಜಾ :

ಸಮಸ್ಯೆಗಳು

[ರಾಜಕೀಯ ಸಲಹೆಗಾರರಾಗಿ ನೇಮಕವಾಗಿರುವ ಶಾಸ್ತ್ರಜ್ಞರಿಗೆ ನಾವು ಕೆಳಕಂಡ ಸಮಸ್ಯೆಗಳನ್ನು ಕಳುಹಿಸಬಹುದು ತಾನೆ? ...]

೧. ಕೊಳ್ಳೆಗಾಲದ ಸೊಳ್ಳೆಗಳು ಮೈಸೂರು ಪ್ರಜೆಗಳಿಗೆ ಮಲೇರಿಯಾ ಪ್ರದಾನ ಮಾಡಿದರೆ, ಅದಕ್ಕೆ ಯಾರಿಂದ ಎಷ್ಟು ಪರಿಹಾರ ಪಡೆಯಬಹುದು?

೨. ಕಾವೇರಿ ನದಿ ವರ್ಷಂಪ್ರತಿ ಮೈಸೂರು ಮಣ್ಣನ್ನು ತುಂಬುತ್ತಿರುವುದಕ್ಕೆ ಪರಿಹಾರವಾಗಿ ಬಂಗಾಳಾ ಕೊಲ್ಲಿಯ ಪರವಾಗಿ ಬಂಗಾಳದವರೂ ಅರಬ್ಬೀ ಸಮುದ್ರದ ಪರವಾಗಿ ಅರಬ್ಬಿ ರಾಷ್ಟ್ರಗಳೂ ಪರಿಹಾರ ಕೊಡಬೇಡವೆ?

೩. ದೇಶೀಯ ಸಂಸ್ಥಾನಗಳನ್ನು ಭೂಪಟಗಳಲ್ಲಿ ತೋರಿಸುವಾಗ ಅವಕ್ಕೆ ಅರಶಿನದ ಬಣ್ಣ ಬಳಿಯುತ್ತಿರುವ ಸದ್ಯದ ಪದ್ಧತಿಯನ್ನು ನಿಲ್ಲಿಸಲು ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕು?

೪. ಮೈಸೂರು ಸಂಸ್ಥಾನಕ್ಕೂ ಸುತ್ತ ಮುತ್ತಣ ಪ್ರಾಂತಗಳಿಗೂ ಹಾಲಿ ನಡೆಯುತ್ತಿರುವ ವರ-ವಧು ವಿಕ್ರಯ ವ್ಯವಸ್ಥೆ ಸಂಸ್ಥಾನದ ದೃಷ್ಟಿಯಿಂದ ಸಮರ್ಪಕವಾಗಿದೆಯೇ, ಇಲ್ಲವೆ?

೫. ಮೈಸೂರ್ ರಸಂ, ಮೈಸೂರ್ ಪಾಕ್, ಮೈಸೂರ್ ಟರ್ಬನ್, ಮೈಸೂರು ನಶ್ಯ ಮುಂತಾದವುಗಳ ಕಾಪಿರೈಟ್ ಹಕ್ಕನ್ನು ಪರಕೀಯರು ಮುರಿಯುತ್ತಿಲ್ಲವೆ? ಮುರಿಯಬಹುದೆ?

೬. ಮೈಸೂರು ಸರ್ಕಾರದ ನಿವೃತ್ತ ಅಧಿಕಾರಿಗಳನ್ನು ದೇಶೀಸಂಸ್ಥಾನಗಳೂ ಇತರ ಸರ್ಕಾರಗಳೂ ಆಮದು ಮಾಡುತ್ತಿರುವುದರಿಂದ, ಅಧಿಕಾರಿಗಳನ್ನು ಬೇಗ ಬೇಗ ನಿವೃತ್ತರಾಗಿಸಿ, ಸರ್ವ ವಿಧದಿಂದಲೂ ಅವರನ್ನು ರವಾನಿಸಲು ನಾವು ಪ್ರಯತ್ನಪಡಬೇಕಲ್ಲವೆ?

೭. ಇತರ ಸಂಸ್ಥಾನಗಳಿಂದ ತಂದ ಬೇಳೆ ಕಾಳು ನಮ್ಮ ನೀರಲ್ಲಿ ಬೇಯದೆ ಇರುವುದಕ್ಕೆ ರಾಜಕೀಯ ಕಾರಣಗಳಿರಬಹುದೆ?.... .... ಇತ್ಯಾದಿ.

ಕೂಶ್ಮಾಂಡ ಪುರಾಣ

ಮೈಸೂರು ಬೆಂಗಳೂರು ಮುಂತಾದ ಕಡೆ ಈಚೆಗೆ ಸ್ಟೇಷನ್ನುಗಳಿಂದ ರೈಲುಗಾಡಿ ಹತ್ತುವವರೇ ಕಡಮೆ. . ಪ್ರಯಾಣಿಕರು ಅನೇಕರು ನೆಟ್ಟಗೆ ಕ್ಯಾರೇಜು ಷೆಡ್ಡಿಗೇ ಹೋಗಿ, ಅಲ್ಲೇ ಅನುಕೂಲವಾದ ಸ್ಥಳ ಹುಡುಕಿ ಹಾಸಿಗೆಗಳನ್ನು ಸಾಲಾಗಿ ಹರಡಿ ಸಾಮಾನುಗಳನ್ನು ಜೋಪಾನವಾಗಿರಿಸಿ ಗಾಡಿ ಫಾರ್ಮೇಷನ್ ಆಗಿ ಪ್ಲಾಟ್ ಫಾರಂಗೆ ಬರುವಾಗ ತಾವೂ ಅದರ ಜೊತೆಯಲ್ಲೇ ಬರುವುದೇ ತಿಳಿದವರ ರೂಢಿಯಾಗಿದೆ. ಮೊನ್ನೆ ನಾನೂ ಹೀಗೆಯೇ ಹೊರಟೆ, ಮೈಸೂರಿಂದ.

ನನ್ನ ಸಾಮಾನೇನೋ ಬರೀ ಬೆಡ್ಡಿಂಗ್ ಮಾತ್ರ. ಆದರೆ, ನಾನು ಹೊರಡುತ್ತೇನೆ ಅಂತ ಗೊತ್ತಾದಾಗ ಶಿವರಾಮಯ್ಯನವರು ಮನೆಗೆ ಬಂದು, "ನೋಡಿ ಮೇಷ್ಟರೇ! ತಮಗೇನೂ ತೊಂದರೆ ಇಲ್ಲ ಗಾಡಿಬಾಡಿಗೆ ಕೊಡುತ್ತೇನೆ. ತಮ್ಮಯ್ಯನವರಿಗೆ ಬರೆದಿದ್ದೇನೆ. ಸ್ಟೇಷನಿಗೆ ಅವರ ಜವಾನ ಬರುತ್ತಾನೆ. ಜವಾನರಿಗೇನೂ ಕಡಮೇ ಇಲ್ಲ, ಅವರಿಗೆ. ಸೆಕ್ಷನ್ ಅಫೀಸರ್ ಅವರು. ಮಗಳಮದುವೆ. ನಂಜನಗೂಡಿಂದ ನಾಲ್ಕು ಕುಂಬಳಕಾಯಿ, ಒಂದು ಗೊನೆ ಬಾಳೇಕಾಯಿ, ಒಂದು ಕಟ್ಟು ಬಾಳೆ ಎಲೆ ಇಷ್ಟೆ. ತಂದು ಆಗಲೇ ಆರು ದಿನ ಆಗಿ ಹೋಯಿತು. ನಾಳೆ ಬೆಳಗ್ಗಿನ ಸಮಯಕ್ಕಾದರೂ ಅವರಿಗೆ ಒದಗುತ್ತವೆ" ಅಂತ ಅಂಗಲಾಚಿದರು.

ಕುಂಬಳಕಾಯಿ ಕೊಂಚ ಕೊಳೆತಿತ್ತು ... ಕೊಂಚ ಏನು, ಸುಮಾರು ಚೆನ್ನಾಗಿಯೇ.... ಚೆನ್ನಾಗಿ ಅಂದರೆ ಹೊಲಸಾಗಿಯೇ. ಅದನ್ನು ಹಾಕಿದ್ದ ಚೀಲವನ್ನು ನಾನು ಗಾಡಿ ಮೇಲುಹಲಗೆಯ ಮೂಲೆಯಲ್ಲಿರಿಸಿ ಬೆಡ್ಡಿಂಗಿಂದ ಮುಚ್ಚಿದೆ.... ನನ್ನದ ಒಂದು ಸಣ್ಣ ಕಂಪಾರ್ಟ್‌ಮೆಂಟು........

ಪ್ಲಾಟ್ ಫಾರಂಗೆ ಬರುತ್ತಲೂ, ಷೆಡ್‌ಗುಟ್ಟು ತಿಳಿಯದ ಎಂಟು ಹತ್ತುಜನ ನನ್ನ ಸಣ್ಣ ಕಂಪಾರ್ಟ್‌ಮೆಂಟಿನೊಳಕ್ಕೂ ಬಂದು ಸೇರಿಕೊಂಡರು. ಬಸ್ ಕಂಡಕ್ಟರ್ ಹೇಳುವಹಾಗೆ, ಫುಲ್ ಭರ್ತಿ.

ಮನುಷ್ಯ ಪ್ರಾಣಿಯ ಮೂಗಿನ ಮಾಹಾತ್ಮೆ ಎಷ್ಟು ಅಂತೀರಾ! ಯಾವನೋ, ಒಬ್ಬ, ಸಾನಿಟರಿ ಇನ್‌ಸ್ಪೆಕ್ಟರ ಮೊಮ್ಮಕ್ಕಳ ಪೈಕಿ ಇರಬೇಕು, "ಏನೋ ವಾಸನೆ ಥೂ" ಅಂದ. ಸರಿ, ಎಲ್ಲರೂ ಮೂಗು ಎಳೆದು ನೋಡಿದರು. "ರೈಲಿನವರು ಈಚೆಗೆ ಫಿನ್ನೈಲೇ ತರಿಸುವುದಿಲ್ಲ' ಇಲಿ, ಹೆಗ್ಗಣ ಸತ್ತುಬಿದ್ದಿರಬೇಕು ಕಂಬಿನಡುವೆ "ಎಷ್ಟು ಹೊತ್ತಿಗೆ ಬಿಡ್ತಾರಪ್ಪ ಇದನ್ನ' "ಕೊಂಚ ಅತ್ತಲಾಗಾದರೂ ನಿಲ್ಲಿಸಬಾರದಾಗಿತ್ತೇ?" "ಇರಲಿ! ಗಾಡಿ ಹೊರಡುತ್ತಲೂ ಸರಿಹೋಗುತ್ತೆ" ಎಂದು ನಾನಾ ಬಗೆಯ ಆಕ್ಷೇಪ ಸಮಾಧಾನಗಳು ಹೊರಬಂದವು.

ರೈಲು ಹೊರಡುತ್ತಲೂ ಸಾನಿಟರಿ ವಂಶಸ್ಥರು ನನ್ನನ್ನೇ ದುರದುರನೆ ನೋಡುತ್ತ, "ದುರ್ನಾತ" ಅಂದರು. ನಾನು ಜಗ್ಗಲಿಲ್ಲ. ಕಡೆಗೆ ನನ್ನೆದುರು

ಕೂತು ಆಕಳಿಸುತ್ತಿದ್ದ ಎಂಟು ವರ್ಷದ ಒಂದು ಹುಡುಗನ ಕಿವಿ ಹಿಂಡಿ, "ಏಳೋ ಎದ್ದು ಹೋಗೋ, ತಿಂಡಿಪೋತ! ಹೋಗೋ, ಕಿಟಕಿ ಹತ್ತಿರ!" ಎಂದು ಗದರಿಸಿದರು. ನಾನು ಮೌನವಾಗಿ ಅವನೊಂದಿಗೆ ಕನಿಕರಿಸಿದೆ. "ನಾಗೇನಹಳ್ಳಿಗಿನ್ನೆಷ್ಟು ದೂರ?" ಎಂದು ಒಬ್ಬರಿಗೊಬ್ಬರು ವಿಚಾರಿಸಿಕೊಂಡರು. ಅಲ್ಲಿ, ಆ ಹುಡುಗ ನನ್ನುಳಿದು, ಮಿಕ್ಕೆಲ್ಲರೂ ಗಾಡಿಯಿಂದಿಳಿದು ಬೇರೆಕಡೆ ಹೋದರು. ಆ ಹುಡುಗನೂ ಶ್ರೀರಂಗಪಟ್ಟಣದಲ್ಲಿಳಿದವನು ಪತ್ತೆಯೇ ಇಲ್ಲದೆ ಪರಾರಿ ಆದ.

ಶ್ರೀರಂಗಪಟ್ಟಣದಲ್ಲಿ ಎಡಕಿಸೆಯಲ್ಲಿ ರಬ್ಬರ್ ಕೊಳವೆ ಸಹಿತ ಒಬ್ಬ ಡಾಕ್ಟರು ನನ್ನ ಗಾಡಿಯೊಳಕ್ಕೆ ಬಂದು, ಬಾಗಿಲುಹಾಕಿ, ಕೂತು ಕಿಟಕಿ ತೆರೆದು, ಬೆಂಚಿನ ಕೆಳಗೆ ಬಗ್ಗಿನೋಡಿ, ಸಿಗರೇಟು ಕೈಬೆರಳಿನ ವಾಸನೆ ನೋಡಿಕೊಂಡು, ಜೋಬಿಂದ ಕರವಸ್ತ್ರ ಹೊರತೆಗೆದು ಅದನ್ನು ಮೂಸಿನೋಡಿ, ಕಡೆಗೆ, "ಥೂ! ವಾಸ್ನೆ!" ಎಂದು ಶಪಿಸುತ್ತ, ಇಳಿದು ಪಕ್ಕದ ಗಾಡಿ ಹತ್ತಿದರು.

ಮಂಡ್ಯದಲ್ಲಿ ನೂಕೋ ನುಗ್ಗಲು! ಒಂದು ಇಡೀ ಬೀಗರ ಪಾರ್ಟೀನೇ ನನ್ನ ಗಾಡಿ ಹತ್ತಿರಕ್ಕೆ ಬಂದರು. ಮೊದಲು ಟ್ರಂಕು ಹಾಸಿಗೆಗಳನ್ನೆಲ್ಲ ಒಬ್ಬರು ಒಳಕ್ಕೆ ಹೇರಿದರು. ನಾಲ್ಕೈದು ಹೊಸ ಕುಕ್ಕೆಗಳೂ ಬಂದವು. ಅನಂತರ, ವರನ ಸೋದರ ಮಾವ ಒಳಗೆ ತಲೆ ಇಟ್ಟ. ಮೂಗನ್ನು ಮೇಲಕ್ಕೆತ್ತಿದ. ಬಂದ ವಾಂತಿಯನ್ನು ಸಮಯದಲ್ಲಿ ಅದುಮಿ ಹಿಡಿದು ಹೊರಕ್ಕೆ ಹಾರಿ, "ಬನ್ನಿ! ಬೇರೆಗಾಡಿಗೆ ಹೋಗೋಣ" ಎಂದು ಗಡಿಬಿಡಿಮಾಡುತ್ತಾ ಹೊರಟುಹೋದ. ಇನ್ನೇನು, ರೈಲು ಕದಲುವ ಸಮಯ, ಅನ್ನುವಷ್ಟರಲ್ಲಿ, ಕರೀ ಕೋಟಿನವರೊಬ್ಬರು— ಲಾಯರು ಎಂದು ಹೇಳುವಹಾಗಿಲ್ಲ, ಏಕೆಂದರೆ ತಕ್ಕಮಟ್ಟಿಗೆ ಕಳೆ ಇತ್ತು ಅವರ ಮುಖದಲ್ಲಿ— ಅವರು ಹಾರಿಬಂದು ಹತ್ತಿಕೊಂಡು ಬೆವರೊರಸಿಕೊಂಡರು. ಗಾಡಿ ಹೊರಡುತ್ತಲೂ ಅವರು ಕೆಂಪುರಟ್ಟಿನ ಭಗವದ್ಗೀತೆಯೊಂದನ್ನು ತೆಗೆದು ವಿಶ್ವರೂಪದರ್ಶನ ಭಾಗವನ್ನೋದಲಾರಂಭಿಸಿದರು. ಆದರೆ, ಸಕ್ಕರೆ ಕಾರ್ಖಾನೆ ದಾಟುತ್ತಲೂ ಅವರು ನನ್ನಕಡೆ ತಿರುಗಿ, "ಆ ಬಾಗಿಲು ಹಾಕಿ ಭದ್ರವಾಗಿ" ಅಂದರು. ನಾನು 'ಆ' ಬಾಗಿಲನ್ನು ತೆರೆದು ಮತ್ತೆ ಫಟ್ ಅಂತ ಬಲವಾಗಿ ಹಾಕಿದೆ, ಅವರ ಸಮಾಧಾನಕ್ಕಾಗಿ. "ಏನೋ ನಾತ" ಅಂದರು "ಕಾಕಂಬಿಯೋ ಏನೋ" ಅಂದರು. "ಕಬ್ಬಿನ ಗೊಬ್ಬರ" ಅಂದರು ನಾನು ಮಾತನಾಡಲಿಲ್ಲ. ಮದ್ದೂರಲ್ಲಿ ಎರಡೂವರೆ ಆಣೆ ಖರ್ಚು ಮಾಡಿ ಅವರಿಗೆ ಕಾಫೀ ಕುಡಿಸಿದೆ. ಆದರೂ ಆತ ಗೀತಾಸಮೇತವಾಗಿ ಹೊರಟೇ ಹೋದರು.

ಅಲ್ಲಿಂದ ಮುಂದಕ್ಕೆ ನಾನು ಆ ತುಂಬು ರೈಲಿನಲ್ಲಿ ಏಕಾಕಿಯಾಗಿಯೇ ಪ್ರಯಾಣ ಮಾಡಿದೆ. ಜನವೇನೋ ಸ್ಟೇಷನ್ನ ಸ್ಟೇಷನಲ್ಲೂ ನನ್ನಗಾಡಿ ಒಳಗಿನ ಖಾಲಿ ಜಾಗ ನೋಡುತ್ತಲೂ ಅಲ್ಲಿಗೇ ಓಡಿಬರುವರು. ನಾನೂನೂ, "ಬನ್ನಿ! ಸಾರ್!" "ಬನ್ರಣ್ಣ" "ಆ ವು ಜಿ" "ಕಮಿನ್ ಸಾರ್" "ಸಾಸ್ತ್ರೀಳಾ, ವಾರುಂಗೋ" ಎಂದು ನಯವಿನಯಾಭಿನಯಗಳಿಂದ ಕರೆದೆ. "ನಶ್ಯ ಬೇಕಾದರೆ ಕೊಡುತ್ತೇನೆ" ಎಂದು ಅವರ ಮೂಗು ಮುಂದೆ ಲಂಚವಾಡಿಸಿದೆ. ಆದರೆ,

ಬಂದವರೆಲ್ಲಾ ಬಾಗಿಲು ತೆರೆದು ಒಳಗೆ ಕಾಲಿಡುತ್ತಲೂ, "ನಾತ" ಎಂದು ಹೇಳಿ ಹೊರಟೇ ಹೋಗುವರು........

ಬೆಂಗಳೂರಲ್ಲಿ ತಮ್ಮಯ್ಯನವರ ಸೆಕ್ಷನ್ ಜವಾನರೊಬ್ಬರಲ್ಲಿ ಒಬ್ಬರೂ ಬಂದಿರಲಿಲ್ಲ. ನಾನೇ ಚೀಲ ಮುಂತಾದವುಗಳನ್ನಿಳಿಸಿ ಗೇಟ್ ಹತ್ತಿರಕ್ಕೆ ಹೊತ್ತೆ. ಜನರ ಗುಂಪು ನನ್ನ ಮುಂದೆ ಹೋಳಾಗಿ ದಾರಿ ಬಿಟ್ಟಿತು. ಅಲ್ಲೇ ನಿಂತಿದ್ದ ಖಾಕಿ ಸೂಟಿನವರೊಬ್ಬರು ಗುಡಿಸುವವನನ್ನ ಕರೆದು, "ಥೂ! ನಿನ್ಮನೆ ಹಾಳಾಗ! ಒಳ್ಳೆ ರೈಲು ಬರೋಹೊತ್ಗೆ ಏನೋ ಇದು ವಾಸ್ನೆ" ಎಂದು ಬೈದರು.

ನಾನು ಬೇಗ ಬೇಗನೇ ಜಟಕಾಸಾಲಿಗೆ ಬಂದು, ಸಾಮಾನುಗಳನ್ನು ಒಂದರೊಳಗಿಟ್ಟೆ. ಕೊಳೆತ ಕುಂಬಳಕಾಯಿ ರಸ ಚೀಲದಿಂದ ಜಿನುಗಿ ಉದ್ದಕ್ಕೂ ತೊಟ್ಟಿಕ್ಕುತ್ತಿತ್ತು. ಬೀದಿ ಜನರೆಲ್ಲ ಆನೆಗಳಹಾಗೆ ಮೂಗೆತ್ತಿ ಹಿಡಿದು ನನಗೆ ಮನ್ನಣೆ ಮಾಡುತ್ತಿದ್ದರು. ಸೈಕಲ್ ಮೇಲೆ ಬರುತ್ತಿದ್ದವರನೇಕರು, ಅನೇಕರು ಯಾಕೆ ಎಲ್ಲರೂ, ನನ್ನ ಗಾಡಿಯ ಹಿಂದೆ ಬರುತ್ತಲೂ, ಸರಕ್ಕನೆ ಅಡ್ಡಹಾದಿ ತುಳಿಯುತ್ತಿದ್ದರು.

ಇದ್ದಕಿದ್ದಹಾಗೆ ಗಾಳಿ ನನ್ನಕಡೆಯಿಂದ ಕುದುರೆಕಡೆಗೆ ತಿರುಗಿತು. ಆಗ, ನಚಿಕೇತಸ್ಸನ ಅಪ್ಪ ಅಶ್ವಮೇಧಕ್ಕೆ ಉಪಯೋಗಿಸಲು ತಕ್ಕದ್ದಾಗಿದ್ದ ಆ ಹಯಗ್ರೀವ ಅಶಕ್ತಪಾಲನ ಸಭೆಯವರಿಗಿಂತಲೂ ನಿಧಾನವಾಗಿ ಹೋಗುತ್ತಿದ್ದ ಆ ಕುದುರೆ, ಆಗಾಖಾನರ ಜೂಜಿನ ಕುದುರೆಯಷ್ಟು ವೇಗದಿಂದ ಧಾವಿಸಿತು. ತಮ್ಮಯ್ಯನವರ ಮನೆ ಮುಂದೆ ಅದನ್ನು ನಿಲ್ಲಿಸಲು ನಾನು ಕುಂಬಳಕಾಯಿ ಚೀಲವನ್ನೇ ಅದರ ಮೂಗೆದುರು ರಸ್ತೆಗೆಸೆಯಬೇಕಾಯಿತು.

"ಈ ಊರಲ್ಲಿ ದುರ್ನಾತಕ್ಕೇನ್ರಿ ಕಡಮೇ ಬಂದಿರೋದು? ಇದನ್ನು ಯಾಕ್ರಿ ತಂದಿರಿ?" ಎಂದು ತಮ್ಮಯ್ಯನವರು ಟೀಕಿಸಿದರು. "ನಿಮ್ಮ ರೂಂನಲ್ಲೇ ಎರಡು ದಿವಸ ಇಟ್ಕೊಂಡಿರಿ. ಬೀಗರೆಲ್ಲ ಹೊರಟಮೇಲೆ...." ಎಂದು ಪ್ರಾರಂಭಿಸಿದರು. ನನಗೆ ರೇಗಿತ. "ಒಂದು ಗುಂಡಿ ತೋಡಿಸಿ ಹೂತು ಬಿಡಿ, ಇವತ್ತೇ" "ಹದಿನೈದು ರೂಪಾಯಿ ಕೊಟ್ಟರೂ ಅಷ್ಟು ಆಳ ತೋಡುವುದಿಲ್ಲ ಗುಂಡೀನ ಒಬ್ರೂವೆ" ಎಂದು ನಿಟ್ಟುಸಿರುಬಿಟ್ಟರು.

ಪುಣ್ಯಕ್ಕೆ ಅಗ ಅದೇ ದಾರಿಯಲ್ಲಿ ಒಂದು ಮುನಿಸಿಪಲ್ ಲಾರಿ ಬಂತು. ಚೀಲ ಕಟ್ಟು, ಗೋನೆ ನನ್ನ ಬೆಡ್ಡಿಂಗ್ ನಾಲ್ಕನ್ನೂ ಅದರೊಳಕ್ಕೆಸೆದೆ. ಸದ್ಯ; ಆ ಡ್ರೈವರ್ ಮಹರಾಯ ಒಲ್ಲೆ ಅನ್ನಲಿಲ್ಲ.

✤ ✤ ✤

ನಮಗೇ ಅಂತ ಒಂದು ಇಡೀ ಕಂಪಾರ್ಟ್‌ಮೆಂಟ್ ರಿಸರ್ವ್‌ಮಾಡಿಕೊಂಡು ಹಾಯಾಗಿ ಪ್ರಯಾಣ ಮಾಡಬೇಕಾದರೆ, ಒಂದು ಸುಲಭೋಪಾಯ ಸಿಕ್ಕಿತಲ್ಲಾ ಎಂಬ ಸಂತೋಷದಲ್ಲಿ ಆ ರಾತ್ರಿ ಬರೀ ನೆಲದ ಮೇಲೆ ಮಲಗಿದ್ದರೂ ನನಗೆ ನಿದ್ದೆ ಬಂತು.

—ಪಾತಾಳಿ.

ನವೀನ ಗಾದೆಗಳು

(ವಿಶ್ವಶಾಂತಿ)

ಕೊಂಕುಳಲ್ಲಿ ದೊಣ್ಣೆ, ಕೈಯಲ್ಲೂ ದೊಣ್ಣೆ, ಬಾಯಲ್ಲಿ ಮಾತ್ರ—
" ಲೋಕಾಸ್ಸಮಸ್ತಾಸ್ಸುಖಿನೋಭವಂತು ! "

ಹೊತ್ತಿಗೊದಗಿದ್ದು ರಷ್ಯ; ಎತ್ತಿ ಒಗೆದದ್ದು ಇಂಡ್ಯ,

ತಾನೊಂದೆಣಿಸಿದರೆ, ಅಮೆರಿ ಇನ್ನೊಂದೆಣಿಸಿದ

" ಮೂಕಂ ಕರೋತಿ ಸಾಮ್ರಾಜ್ಯಂ "

ತುಂಬಿದ ಕೊಡ ತುಳುಕುವುದಿಲ್ಲ; ಅದನ್ನು ಹೊತ್ತವನು ಸತ್ತ, ಆಕ್ಸ್ಟ್.

ಯುದ್ಧಕಾಲೇ ಶಸ್ತ್ರಾಭ್ಯಾಸಃ ; ಯುದ್ಧ ಮುಗಿದು ಶಾಂತಿಕಾಲೇ
ಅದರ ಪ್ರಯೋಗಃ.

ಇಂಡಿಯಾದವರು ಅಂದ್ರೆ ಥಂಡಿಯಾಗಿ ಹೇರಿಸು, ಅಂದ

ಉಳಿಸಿರೋ ಜಗತ್ನ, ಅಂದರೆ, ಬಿಳಿಯೋರೆಷ್ಟು ಜನ, ಅನ್ನೋದೆ ?

ಸಾವಿರ ಕುದುರಿ ಸರ್ದಾರ್ ! ಊರಿಗೆ ಬಂದರೆ, ಖಬರ್‌ದಾರ್ !

ಹೊಸದರಲ್ಲಿ ರಾಮುಸ್ವಾಮಿ ಕೈ ಎತ್ತಿದ್ದೂ ಎತ್ತಿದ್ದೇ !

ಅಲ್ಪನಿಗೆ ಅರ್ಥ ಸಿಕ್ಕರೆ, ಮಧ್ಯರಾತ್ರೀಲಿ ಇನ್ನೊಂದರ್ಥಕ್ಕೆ ಕನ್ನ ಹಾಕಿದ

ಭಂಡ ಭಂಡರ ಜಗಳದಲ್ಲಿ ಪೋಲೆಂಡ್ ಬಡವಾಯಿತು

ಅಮೇರಿಕಾಗೆ ಹೋದರೂ ಅವಲಕ್ಕಿ ಮೊಸರೇ !

" ಪರಿತ್ರಾಣಾಯ ಪರಂಗೀಣಾಂ ಶಂಡೆಯಾಮಿ ಯುಗೇ ಯುಗೇ ! "

ಗೆದ್ದುಕೊಟ್ಟವರಿಗೆ ಉದ್ದಿನ ವಡೆ ; ಹಂಚಿದವರಿಗೆ ಪಂಚಭಕ್ಷ್ಯ ಪರಮಾನ್ನ.

" ಚಾತುರ್ವರ್ಣ್ಯಂ ಮಯಾಸೃಷ್ಟಂ ಚೀನಾಂಗ್ಲಾಮೆರ್ಕರಷ್ಯಯೋಃ "

ತೋಳನ ಕೋರ್ಟ್‌ನಲ್ಲಿ ಕುರಿ ಗೋಳು ಹೇಳಿಕೊಂಡಿತು.

ಬಾ ಡಿ ಲೈ ನ್

" ನಮ್ಮ ಮನೆ ಮುಂದಿನ ರಸ್ತೆಯಲ್ಲಿ ನೀವು ನಿನ್ನೆ ಸಂಜೆ ಹೋಗಿಲ್ಲವೇನು ? ಹಾಗಾದರೆ, ನಡೆದ ಸಂಗತಿಯನ್ನು ನಾನೇ ವಿವರಿಸುತ್ತೇನೆ" ಎಂದು ನಾರಾಯಣಯ್ಯ ನವರು ಪ್ರಾರಂಭ ಮಾಡಿದರು. ಅವರ ಮನೆಗೆ ನಾನು ಹೋದಾಗ ಅವರ ಮಗ ನಾರಾಯಣಯ್ಯನ ಬೆನ್ನಿಗೆ ಟರ್ಪೆಂಟೈನ್ ಹಚ್ಚಿ ಬಿಸಿನೀರಿನಲ್ಲಿ ಅದ್ದಿದ ಟವಲನ್ನು ಹಿಂಡಿ ಅದಕ್ಕೆ ಶಾಖ ಕೊಡುತ್ತಿದ್ದ, ರಾಮನವಮಿಯ ಮಾರನೆ ದಶಮಿ. " ಏನಿದು ಅವಾಂತರ ? " ಅಂತ ಕೇಳಿದ್ದಕ್ಕೆ ಭಾರಿ ಕಥೆಯನ್ನೇ ಒಪ್ಪಿಸಿಬಿಟ್ಟರು ಮಹರಾಯರು!

" ಸಾಹುಕಾರರಿಗೆ ಹೇಳಿದ್ದೆ, ಮನೆಯಲ್ಲಿ ಪೂಜೆ ಅಂತ ನಿನ್ನೆ. ಆದ್ದರಿಂದ ಪೇಟೆಕಡೆ ಚಾಕರಿಗೆ ಹೋಗಲಿಲ್ಲ. ಏನೋ ಯತ್ ಕಿಂಚಿತ್ ರಾಮ ಕೊಟ್ಟಿದ್ದು, ಈಗಿನ ಯುದ್ಧ ಕಾಲದಲ್ಲಿ, ತಿಂದೆ. ಮಲಗಿ ಒಂದು ಘಂಟೆ ನಿದ್ದೆತೆಗೆದೆ. ಎರಡನೆಯ 'ಡೋಸ್' ಪಾನಕ ಕುಡಿಯುತ್ತಾ ಇದ್ದೆ ....ಬಂತಲ್ಲಾ ಹಾಳು ಗ್ರಹ ಚಾರ" ಅಂದರು. " ಏನು ? ಬೆನ್ನು ನೋವೇ ? " ಅಂದೆ ನಾನು, ಸಹಾನು ಭೂತಿಯಿಂದ. " ಅಲ್ಲ, ಅಲ್ಲ ವಾನರಸೇನೆ ! " ಅಂದರು ಅವರು. " ಏನು ? ಬೀದಿ ಹುಡುಗರೆಲ್ಲಾ ರಾಮದೇವರ ಪಟಹಿಡಿದುಕೊಂಡು ಶುದ್ಧಬ್ರಹ್ಮ ಹೇಳುತ್ತಾ ಒಳಗೆ ನುಗ್ಗಿದರೋ ? " ಎಂದೆ ನಾನು. " ಇಲ್ಲ, ಇಲ್ಲ ! ಸಾಕ್ಷಾತ್ ಕಪಿಗಳೇ ! ಕಪಿಗಳು ! ಕೋತಿ ಹಿಂಡು !.... ನೋಡಿ .... ಮುನಿಸಿಪಾಲಟಿಯಂತೆ ! ಡಿಸ್ಟ್ರಿಕ್ಟ್ ಬೋರ್ಡಂತೆ ! ಪ್ರಜಾಪ್ರತಿನಿಧಿ ಸಭೆಯಂತೆ ! ವರ್ಷಕ್ಕೆರಡು ಚುನಾವಣೆಗಳು, ಇವೆಲ್ಲ ಬರೀದಂಡ.... ಕೋತಿ ಹಾವಳಿ ತಪ್ಪಿಸುವುದಕ್ಕಾಗದ ಈ ಜನ ಕ್ಷಾಮ, ಭೂಕಂಪ, ಯುದ್ಧ, ಕ್ರಾಂತಿ ಇವನ್ನು ಹೇಗೆ ತಡೆಯುತ್ತಾರೋ, ಕಾಣೆ " ! ಎಂದು ರೇಗಿದರು. "ಮನೆಮುಂದೆ ನಾಲ್ಕು ತೆಂಗಿನಮರ ಇದೆಯಲ್ಲಾ ! ಹತ್ತಿಬಿಟ್ಟಿತು ನೋಡಿ ಕಪಿಗಳು ಮಕ್ಕಳು ಮರಿ ಸಹಿತ....ಸರಿ ! ಮಂದಲಿಗೆ ಸುತ್ತಿಟ್ಟುಬಿಟ್ಟು ಜೇಚ್ಚ್ಯಾನ ರಸ್ತೆಗೆ ಕಳುಹಿಸಿ ಒಂದುಕುಕ್ಕೆ ಕಲ್ಲು ಆರಿಸಿ ಕೊಂಡು ತರಹೇಳಿದೆ. ನಮ್ಮ ದೊಡ್ಡ ಹುಡುಗ ಅದೇ, ಇವನು ಕಲ್ಲು ಬೀರುವುದರಲ್ಲಿ ಬಹು ಜಾಣ. ಆದರೆ ಅವನೆಲ್ಲೋ ಕೋಸುಂಬರಿ ಬೇಟೆಗೆ ಹೋಗಿದ್ದ. ಷರ್ಟು ಬಿಚ್ಚಿ, ಅಂಗಳಕ್ಕಿಳಿದು ಎಂಟು ಹತ್ತು ಕಲ್ಲು ಬೀರಿದೆ, ಆಮೂಲೆಮರದ ಮೇಲಕ್ಕೆ ! ಅಲ್ಲೇ ಹೂ ಕೊಯ್ಯುತ್ತಿದ್ದ ಶಾರಿ ತಲೆಗೆ ಒಂದು ಕಲ್ಲು ಬಿತ್ತು. ಅದರ ರಂಪವೋ ರಂಪ. ಐಯೊಡೀನ್ ಹಚ್ಚಿ ಅದನ್ನು ಮಲಗಿಸುವುದರೊಳಗೆ ಮೇಲಿಂದ ಅವು ಆರು ಎಳೆನೀರನ್ನು ಕುಡಿದು ಎಸೆದವು. ಹೋಯಿತಲ್ಲ, ಹನ್ನೆರಡಾಣೆ ! ರಾಮೋತ್ಸವಕ್ಕೆ ಚಂದಾ ಹಣ ಬೇರೆ ಕೊಟ್ಟಿದ್ದೆ. ಒಂದು ರೂಪಾಯಿ, ಆ ಕುಂಟು ರಾಮರಾಯರ ಕಾಟ ತಡೆಯಲಾರದೆ.

ಸರಿ ! ಕುಂಟು ರಾಮರಾಯರ ಮೇಲಿನ ಕೋಪವನ್ನು ಆ ವಾನರ ಸೇನೆ ಮೇಲೆ ತೀರಿಸಿದೆ. ಕಪಿಬುದ್ಧಿ ಬಲು ಚುರುಕು, ಛಂಗನೆ ನೆಗೆಯುವುದು, ಎಂದರೇನು,

ಕಲ್ಲು ಹೊಡೆಯುವವನ ಗುರಿ ತಪ್ಪಿಸುವುದಕ್ಕೆ ಏನೇನು ಉಪಾಯ ಕೈ ಕೊಳ್ಳಬೇಕು, ಸಂತಾನ ಪೋಷಣೆಯ ಕ್ರಮ ಯಾವುದು, ಎಂಬುದೆಲ್ಲವನ್ನೂ ನಾನು ಆ ದಿನ ಆ ಕಪಿಗಳಿಂದ ಕಲಿತೆ. ಕಲ್ಲು ಮಾತ್ರ ಒಂದೂ ತಗುಲಲಿಲ್ಲ.

ಅಷ್ಟು ಹೊತ್ತಿಗೆ ನಮ್ಮ ಮನೆ ಮುಂದಿನ ರಸ್ತೆಯಲ್ಲಿ ರಾಮಸೇವಾ ಸೋಮಾರಿಗಳ ಗುಂಪೊಂದು ಸೇರಿತ್ತು. ಹುಡುಗರೆ ಹೆಚ್ಚು. "ಕೋತಿ ತಿಮ್ಮ! ಕೋತಿ ತಿಮ್ಮ!" ಎಂದು ಅವು ಒಂದೇ ಸಮನೆ ತಮ್ಮ ಗೆಳೆಯರನ್ನು ಕೂಗಿದವು. ಸುತ್ತ ನಾಲ್ಕು ಬೀದಿಯ ಹುಡುಗರೆಲ್ಲ ಓಡೋಡಿ ಬಂದವು. ಇಷ್ಟೊಂದು ಮಕ್ಕಳು ಅಷ್ಟು ಚಿಕ್ಕ ಪ್ರದೇಶದಲ್ಲಿವೆ ಎಂದು ಮನಗಂಡಾಗ ನನಗೆ ದಿಗಿಲಾಯಿತು.

ಆಗ ನನ್ನದೊಂದು ಕಲ್ಲು ಕಪಿಯೊಂದರ ಬೆನ್ನಿಗೆ ಸರಿಯಾಗಿ ಬಿತ್ತು. ನಾನು ಚಿಕ್ಕಂದಿನಲ್ಲಿ ಕಾಲೇಜು ಬಿ. ಟೀಂ ಬೌಲರ್ ಆದಾಗ ಭಾರಿ ಬ್ಯಾಟ್ಸ್‌ಮನ್ ಭೀಮರಾಯನನ್ನು ಔಟ್ ಮಾಡಿದ್ದು ನೆನಪಾಯಿತು. ಬೌಲಿಂಗ್‌ನಲ್ಲೇ ಕಾಲಕಳೆದು ಎನ್‌ಟ್ರನ್ಸ್ ಫೆಯಿಲಾದ್ದು ಸಾರ್ಥಕವಾಯಿತು ಅಂದುಕೊಂಡೆ. ನಮ್ಮ ಕಾಲಕ್ಕೆ ಬಾಡಿ ಲೈನ್ ಬೌಲಿಂಗ್ ಬಂದಿರಲಿಲ್ಲ! ಇವನು ಅದರಲ್ಲಿ ನಿಸ್ಸೀಮ!.... ಇರಲಿ.... ಆ ಕಪಿ ಬಹುವಿಕಾರವಾಗಿ ಕಿರಿಚಿಕೊಂಡು ತೆಂಗಿನ ಮರದಿಂದ ನನ್ನ ಮನೆ ಮೇಲಕ್ಕೆ ಹಾರಿ ಪಕ್ಕದ ಮನೆಮೇಲೆ ಕೂತುಕೊಂಡಿತು. ಅದರ ಧರ್ಮ ಪತ್ನಿಯೋ ಏನೋ ಮತ್ತೊಂದು ಕಪಿ ಅದನ್ನೇ ಹಿಂಬಾಲಿಸಿ ಹೋಗಿ ಅದರ ಬೆನ್ನಿಂದ ಬಸಿಯುತ್ತಿದ್ದ ರಕ್ತವನ್ನು ನಾಲಗೆಯಿಂದ ನೆಕ್ಕಿ ಶುಶ್ರೂಷೆ ಮಾಡಿತು. ಮಿಕ್ಕ ಕೋತಿಗಳೂ ಹೆದರಿ ಚೆಲ್ಲಾ ಪಿಲ್ಲಿಯಾದುವು.

ಆದರೆ, ಇದರಿಂದ ನನಗೆ ಎರಡು ಅನಿರೀಕ್ಷಿತ ಅನಾಹುತಗಳಾದವು ನೋಡಿ. ಆ ರಾಮಸೇವಾ ಸಮಾಜದಿಂದ ಬಹಿಷ್ಕಾರ ಪತ್ರ! ಎರಡನೆಯದು, — ಈ ಬೆನ್ನು ನೋವು! 25 ವರ್ಷಗಳ ಅನಂತರ ಕೋತಿಬಾಲವನ್ನೇ ವಿಕ್ಕೆಟ್ಟಾಗಿ ಭಾವಿಸಿದಕ್ಕೆ ಶಿಕ್ಷೆ"....ಎಂದರು. "ಚೆನ್ನಾಗಿ ಶಾಖಕೊಡಿ" ಅಂತ ಹೇಳಿ ನಾನು ಹೊರಟುಬಂದೆ.

——o——

ಕೆಲವರಿದಾರೆ ನರ್ಸುಗಳು .... ಬಾಯಿಗೆ ಥರ್ಮಾಮೀಟರಿಟ್ಟುಬಿಟ್ಟು, "ಯಾಕ್ರಿ! ಜ್ವರ ಏರಿದೆ?" ಅಂತಾರೆ!.... ಆದರೆ, ಅಂಥವರು ಕೆಲವರೇ!

♣ ♣ ♣

"ಈ ಪರೀಕ್ಷೆಯಲ್ಲಿ ಫೆಯಿಲಾದರೆ ನಿನ್ನನ್ನು ನಾನು ಮುಂದಕ್ಕೋದಿಸುವುದೇ ಇಲ್ಲ. ಖಂಡಿತ!" ಎಂದು ತಂದೆ ಗದರಿಸಿದರು. ಹುಡುಗ ಖಾಲಿ ಪೇಪರ್ ಕೊಟ್ಟು ಹಿಂದಕ್ಕೆ ಬಂದಿದಾನೆ. ತಂದೆ ಇನ್ನೂ ರಿಸಲ್ಟಿಗೆ ಕಾಯುತ್ತಿದಾರೆ.

ಅನರ್ಥಕೋಶ

—o—

ಮೌಢ್ಯ: ಇತರರ ಮೆದುಳಿನ ಪರಿಸ್ಥಿತಿ; ಪ್ರಗತಿ ಪ್ರೇಮಿಗಳು ಯಾರೂ ಇದನ್ನು ಕಂಡು ಸುಮ್ಮನಿರಲಾರರು.

ಮ್ಯಾನ್: ಮನುಷ್ಯ ಕುಲವನ್ನೇ ನಾಶಮಾಡಲು ಯತ್ನಿಸುತ್ತಿರುವ ಒಂದು ವಿಷಕ್ರಿಮಿ.

ಮಂತ್ರಿ: ಇದಕ್ಕೆ ಜಾಕಿ ಎಂತಲೂ ಹೇಳುತ್ತಾರೆ, ಸಾಮಾನ್ಯವಾಗಿ ಒಂದು ಪ್ಯಾಕೆಟ್ಟಿನಲ್ಲಿ ನಾಲ್ಕರಂತೆ ಇರುತ್ತವೆ.

ಯತಿ: "ಪಾಪಿ" ಚಿತ್ರ (ಪುನರ್ಮುದ್ರಿತ; ಪರಿಷ್ಕೃತ).

ಯಮ: ಕಾನ್‌ಸೆಂಟ್ರೇಷನ್ ಕ್ಯಾಂಪೊಂದರ ಸಂಚಾಲಕ.

ಯುದ್ಧ: ಶಾಂತಿಯ ಮಗು.

ಯೌವನ: ಈ ವನವನ್ನು ಹೊಕ್ಕರೆ ಅನೇಕರಿಗೆ ಮುಂದಿನ ದಾರಿಯೇ ತೋರುವುದಿಲ್ಲ.

ರಗಳೆ: ಈಗಿನ ಕನ್ನಡ ಕವಿಗಳ ಬರವಣಿಗೆಯೆಲ್ಲ ಇದೇ

ರಾಗಿ: ಯೋಗ್ಯರಾಗಿ, ಭೋಗ್ಯರಾಗಿ, ಭಾಗ್ಯವಂತರಾಗಿ—ಎಂಬ ೩ ತರಹ ರಾಗಿ ಇವೆ (ಪುರಂದರದಾಸ; ಆಹಾರ ಇಲಾಖೆ).

ರಿಪೇರಿ; ನೀವು ಕೊಟ್ಟದ್ದೂ ಅವರಿಗೆ; ಅವರು ಬಿಚ್ಚಿಟ್ಟದ್ದೂ ಅವರಿಗೆ.

ರುಚಿ: ಸಂಸಾರ ಹೂಡಿದ ಮೂರು ತಿಂಗಳಲ್ಲೇ ನಾಶವಾಗುವ ಒಂದು ಘಟಕ.

ಋಷಿ: ಈತನ ಮೂಲವನ್ನು ನಾವು ಹುಡುಕಬಾರದೆಂದೇ ಈತ ಹಾಗೆ ಪಟ್ಟಾಗಿ ಕೂತಿರುವುದು.

ರೂಲು: ಬಡಪಾಯಿಗಳನ್ನು ತಡೆಯಲು ಹಾಕಿರುವ ಬೇಲಿ

ರಂಪ: ಬಾಲಲೀಲೆ

ಲಡ್ಡು: ಧಾರವಾಡದ ಕಡೆ ಲಡ್ಡು ಅಂದರೆ ಬರೀ ಹುಳುಕು!

ಲಾಯರು: ಇವರಲ್ಲಿ ಕೆಲವರ ದಡ್ಡತನದಿಂದಲೇ ಹಲವರಿಗೆ ನ್ಯಾಯ ದೊರೆಯುತ್ತಿರುವುದು.

ಲಂಗೋಟಿ: ಬಡವರಿಗಾಧಾರ, ಭೈರಾಗಿಗಳ ಭಾಗ್ಯ, ಮಡಿವಾಳರಿಗೆ ಶತ್ರು, ಮಠದಯ್ಯಗಳ ಮಿತ್ರ (ಪುರಂದರದಾಸರು).

ಶಾರಾಂಶ.

ಎರತ

೧

ಲೋ.... ಲೋ ಮಗು... ಏಳಪ್ಪ. ಕಾದ ನೀರೆಲ್ಲಾ ಆರಿ ಹೋಗುತ್ತೆ. ಎದ್ದು ಬಿಡಪ್ಪ. ಬೇಗ ಒಂದೆರಡು ಚೊಂಬು ನೀರು ಹಾಕಿ ಬಿಡುತ್ತೇನೆ.

ನೋಡೊ ಮತ್ತೆ. ತಿರುಗಿ ರಗ್ಗೆಳೆದುಕೊಂಡು ಮುಸುಕು ಹಾಕ್ಕೊಳ್ಳೋದು. ಭಾನುವಾರ.... ರಜಾ ಇರೋವಾಗ ಎರೆದುಕೊಂಡ್ರೆ ಆಮೇಲೆ ಒಂದೆರಡು ಘಳಿಗೆ ಸುಧಾರಿಸಿಕೊಳ್ಳಬಹುದು.

ಅಂತೂ ಇಷ್ಟೊಂದು ಹೊತ್ತಾಯಿತು, ನಿನ್ನ ಎಬ್ಬಿಸೋಕೆ. ನಾಳೆ ಬರುತ್ತಾಳಲ್ಲಾ ಅವಳ ಕೈಲಿ ಎರೆಸಿಕೊ ಗೊತ್ತಾಗುತ್ತೆ.... ...

ಲೋ ಸ್ವಲ್ಪ ತಡಿಯೋಪ್ಪ. ಬರೀ ನೆಲದಮೇಲೆ ಕೂತ್ಕೊಂಡು ಎಣ್ಣೆ ಒತ್ತಿಸ್ಕೊಬಾರ್ದಪ್ಪ, ಅದು ಶ್ರೇಯಸ್ಸಲ್ಲಾ. ತಡಿ ಆ ಮಣೆ ಕೊಡ್ತೀನಿ.

ನೋಡೋ ಮಗೂ ಎಷ್ಟು ಸರ್ತಿ ಹೇಳ್ಬೇಕೋ ದಕ್ಷಿಣಕ್ಕೆ ತಿರುಗಿ ಕೂತ್ಕೊಳ್ಳ ಬಾರದೂ ಅಂತ. ಎಲ್ಲಿ ಪೂರ್ವಕ್ಕೆ ತಿರುಗಪ್ಪ....ಇನ್ನು ಸ್ವಲ್ಪ ಎಣ್ಣೆ ಒತ್ತಿ ಬಿಡ್ತೇನೆ ತಲೆಗೆ. ಆಯುಷ್ಮಂತನಾಗಿ ಭಾಗ್ಯವಂತನಾಗಿ ಒಳ್ಳೇ ಭಾಗ್ಯಲಕ್ಷ್ಮಿ ಕೈಹಿಡಿದು ಮನೆ ತುಂಬಾ ಮಕ್ಕಳನ್ನ ಪಡಿ.

ಅದ್ಯಾಕಪ್ಪಾ " ಸಾಕಜ್ಜೀ ಹರಸಿದ್ದು ; ಒಳ್ಳೇದನ್ನೇ ಹಾರೈಸ್ತೀ " ಅಂತೀ ಯಲ್ಲಾ. ಮನೆ ನಂದಗೋಕುಲದ ಹಾಗೆ ತುಂಬಿ ತುಳುಕುತ್ತಾ ಇದ್ರೆ ಯಾರಿಗೆ ತಾನೆ ಸಂತೋಷವಲ್ಲಾ........

ನೋಡು ಸುಮ್ಮನೆ ಬಿಸಿ ಬಿಸಿ ಅಂತ ಕಿರಲ್ತೀಯಲ್ಲಾ. ಮೋಡ ಬೇರೆ ಕವುಚೋ ಹಾಗಿದೆ. ನೆಗಡಿ ಆದ್ರೆ ಏನಪ್ಪ ಮಾಡೋದೂ. ಇನ್ನೆರಡೇ ಚೊಂಬು ಬಿಸಿ ನೀರ ಬೆರಸ್ತೀನಿ .. ..

" ಸಾಕು ಸಾಕು " ಅನ್ನಬೇಡವ್ವೋ, ಬಿಸಿ ಬಿಸೀ ನೀರ ಹಾಕಿಸಿಕೊಂಡ್ರೆ ಮೈಕೈನೋವು ಹೋಗುತ್ತೆ. ದೊಡ್ಡೋರ ಮಾತು ಕೇಳಬೇಕೋ, ಅದರಿಂದ ಹಿತವಾಗುತ್ತೆ ....

ಇಲ್ನೋಡು. ಸೀಗೇಕಾಯಿ ಚೆನ್ನಾಗಿದೆ. ಈ ಸರ್ತಿ ನಿಮ್ಮಕ್ಕ ಕಳುಹಿಸಿದ ಸ್ವಲ್ಪ ಚುಗ್ಗುಲು ಪುಡೀನೂ ಬೆರೆಸಿದೀನಿ. ಚೆನ್ನಾಗಿ ಜಿಡ್ಡು ಹೋಗುತ್ತೆ. ಎಲ್ಲಿ ಬೇಗ ತಲೆ ತಿಕ್ಕಿಬಿಡ್ತೀನಿ.

...." ಎಷ್ಟು ದಿವಸಾಂತ ತಲೇ ತಿಕ್ಕಿಸಿಕೊಳ್ಳೊದು ಅಜ್ಜಿ " ಅಂತ ನೀನೇನೋ ಅಂತಿಯಪ್ಪಾ. ನನಗೇನೋ ಮಮತೆ ತಪ್ಪೋಲ್ಲಾ. ನಾಳೆ ಇದ್ದೇ ಇದೇ ನೀನೇ ತಿಕ್ಕಿಕೊಳ್ಳೋದು. ಏಳು ಮಲ್ಲಿಗೆ ಹೂವಿನ ತೂಕದ ನಿನ್ನೆ‌ಂಡ್ತಿ ನಿನಗೆ ತಲೆ ತಿಕ್ಕಿದ್ರೂ, ನೀನು ತಲೆ ತಿಕ್ಕಿಸಿಕೊಂಡೆ ! ಈಗ್ಯಾಕೆ ಆ ಮಾತೂ.

....ಎಲ್ಲಿ, ಎಣ್ಣೆ ಎಲ್ಲಾ ಅಂತಹ ಚೆನ್ನಾಗಿ ಹೋಗಿದೆ ಈ ಸರ್ತಿ ನೀರ್ಹಾಕಿ ಬಿಡ್ತೇನೆ. ಇನ್ನೊಂದು ವಾರ ನೀನೊಬ್ಬ ರಾಯ. ನಿನಗೆ ತೊಂದರೆ ಕೊಡೋಲ್ಲ. ಎದ್ಬಿಡಮ್ಮ ನನ್ನ ಜಾಣ.

.... ಅಗೋ ಹಾಗೆ ಸುಮ್ಮನೆ ನೀರು ಹುಯಿಸಿಕೊಂಡ್ರೆ ಎರೆಯೋರ್ಗೂ ಸಂತೋಷ ಕಾಣೋ ಮರಿ. ಎಲ್ಲಿ ಇನ್ನೆರಡೇ ಚೊಂಬು, ಆ ಮಹಾತಾಯಿ ಮಲ್ಲೇಶ್ವರದಮ್ಮನ ಪ್ರಸಾದ. ಅವಳೇ ನಿನ್ನೆಲ್ಲಿದ್ರೂ ಕಾಪಾಡ್ಬೇಕು. ಅಯ್ತಪ್ಪ ಸದ್ಯ ಗೆದ್ದೆ. ಇನ್ನು ಚೆನ್ನಾಗಿ ಮೈಯೊರೆಸಿಕೊಂಡು ಹೊರಗೆ ಬಾ. ಆಮೇಲಿಂದ ಸ್ವಲ್ಪಾನೇ ಸ್ವಲ್ಪ ಹೊಗೆ ಹಾಕ್ಬಿಡ್ತೀನಿ. " ಏನು ಬಾಣಂತನ ಕೆಟ್ಟುಹೋಯ್ತೇ " ಅಂತ ಹಾಸ್ಯ ಮಾಡ್ತೀಯ ! ಮೋಡ ಕಣಪ್ಪಾ ಇವತ್ತು.

.... ಇಲ್ಲಿ ತಗೋ ಸ್ವಲ್ಪ ಅವಲಕ್ಕಿ. ಕಾಯಿ ಬೆಲ್ಲ ಹಾಕಿದ್ದೀನಿ. ಮನೆ ಅವಲಕ್ಕಿ ಕಾಣೋ. ತಿಂದುಬಿಡು. ಆಮೇಲೆ ಒಂದು ಲೋಟ ಹಾಲು ಕುಡಿದು ಬಿಟ್ರೆ ಅಡಿಗೆ ಆಗೋವರ್ಗೂ ಹಾಯಂತಿರುತ್ತೆ. ಸದ್ಯ ನನ್ನ ದೇವರೂ.

✤ ✤ ✤

೨

ಂದ್ರೇ.... ಅಂದ್ರೇ.... ಏನೂಂದ್ರೇ........ ಏಳೀಂದ್ರೇ........ ಥೂ.... ಕಣ್ಣೆಲ್ಲಾ ಇಂಗಿ ಹೋಯಿತು ಹಾಳು ಹಸೀ ಸೌದೆ.

ನೋಡೀಂದ್ರೆ. ಮತ್ತೆ ಮುಸುಗು ಹಾಕ್ಕೊಳ್ಳೋದೂ. ಭಾನುವಾರ ರಜಾ. ಬೇಗ ಎರದುಕೊಂಡ್ರೆ " ವಿಜಯಲಕ್ಷ್ಮಿ ಹಾಲ್ "ಗೆ ಹೋಗಿ ನೆನ್ನೆ ನೋಡಿದ ಸೀರೇನಾದ್ರೂ ತರಬಹುದು........

ಸದ್ಯ ಬಂದ್ರಲ್ಲಾ. ಅಲ್ಲಾಂದ್ರೆ ಇಷ್ಟು ದಿವಸವಾಯ್ತು. ಬರೀ ನೆಲದ ಮೇಲೆ ಕೂತ್ಕೊಂಡು ಎಣ್ಣೆ ಒತ್ತಿಸ್ಕೊಬಾರ್ದು ಅಂತ ಶಾಸ್ತ್ರ ಗೊತ್ತಾಗೋಲ್ವೇ. ಎದ್ದು ಆ ಮಣೆ ಹಾಕ್ಕೊಳ್ಳ ಬಾರದೆ.

....

ಎಲ್ಲಿ ತಗೊಳ್ಳಿ. ಇನ್ನು ಸ್ವಲ್ಪವೇ ಎಣ್ಣೆ ಇದೆ. ಇದನ್ಯಾಕೆ ಮಿಗಿಸಬೇಕು.... ಬೇಗ ಹಚ್ಚಿಕೊಂಡ್ಬಿಡಿ. ಅಲ್ಲಾಂದ್ರೇ.... ಮೊನ್ನೆ ಎಗ್ಜಿಬಿಷನಲ್ಲಿ ನೋಡಿದ ಬಳೆ

ಬಹಾಳ ಚೆನ್ನಾಗಿದೆ ಅಂದೆ. ತಂದ್ಬಿಡಿ ಒಂದು ಜೊತೆನಾ. ದುಬಾರಿ ಆದ್ರೆ ಆಯ್ತು. ಈಗಿನ ಕಾಲದಲ್ಲಿ ಎಲ್ಲಾ ದುಬಾರಿ ಅಲ್ವೇಂದ್ರೇ..........

ನೋಡಿ. ಸುಮ್ಮನೆ ಬಿಸಿ ಅಂತ ಕೂಗ್ತೀರಲ್ಲಾ, ಕಾದ ನೀರೆಲ್ಲಾ ದಂಡ ವಾಗುತ್ತೆ. ಸೌದೆ ತರೋರು ನೀವು! ನಂಗೇನಂತೆ. ಎಲ್ಲಿ ಇನ್ನೆರಡು ಚೊಂಬು ಬಿಸಿ ನೀರು ಬೆರೆಸ್ತೀನಿ.

ನೋಡೀಂದ್ರೆ. ಸೀಗೆಕಾಯಿ ಎಂತಹುದು ಅಂತ. ಹಾಳು ಜಿಡ್ಡೇ ಹೋಗೋಲ್ಲ. ನನ್ನ ಕೈಲಂತೂ ಆಗೋಲ್ಲ. ನೀವೇ ತಲೆ ತಿಕ್ಕಿಕೊಳ್ಳಬೇಕು........

....ಜಿಡ್ಡೆಲ್ಲಾ ಹೋಯಿತೇಂದ್ರೆ. ಹಾಗಾದ್ರೆ ಈ ಸರ್ತಿ ನೀರ್ಹಾಕಿ ಬಿಡ್ತೇನೆ. ಸದ್ಯ ಇನ್ನು ಬರೋ ಭಾನುವಾರದವರೆಗೆ ಈ ಗೋಳು ಇರೋದಿಲ್ಲ. ಎಲ್ಲಿ ಇನ್ನೆರಡು ಚೊಂಬು. ಆ ಮಹಾತಾಯಿ ದಯದಿಂದ ಕಣ್ಣು ಮಾತ್ರ ಇಂಗಲಿಲ್ಲ........ಟವೆಲ್ ಎಲ್ಲಿ ಇಟ್ಕೊಂಡಿದ್ದೀರಾ?

.... ಏನೂಂದ್ರೇ.... ಆಗಲೇ 9½ ಘಂಟೆ ಆಗ್ಹೋಯ್ತು. ಇನ್ನು ಪೇಟೇಗೂ ಹೋಗೋದಕ್ಕಾಗೋದಿಲ್ಲ. ಒಟ್ಟಿಗೆ ಅಡಿಗೆ ಮಾಡ್ಬಿಡ್ತೀನಿ. ಇನ್ನು ತಿಂಡಿ ಯಾಕೆ? ಈಗ ತಿಂಡಿ ತಿಂದ್ಬಿಟ್ಟರೆ ಹಾಳು ಊಟಾನೇ ಸೇರೋದಿಲ್ಲಾ.

✤ ✤ ✤

ಏನಯ್ಯಾ ಇಷ್ಟು ಅವಸರದಲ್ಲಿ ಹೊರಟೆ ಸ್ಟೇಷನ್ನಿಗೆ. ಯಾವ ಊರಿಗೆ ಹೋಗ್ಬೇಕು?........ ಆ ಏನಂದೇ.... ನಿಮ್ಮಜ್ಜಿ ಊರಿಗೆ ಬರ್ತಾರೆಯೇ....ಅದಕ್ಕೇತ ಕಪ್ಪಾ ಇಷ್ಟು ಸಡಗರ. ಹೂಂ.... ಹೊರಡಪ್ಪಾ........

—ಕೃಷ್ಣಸ್ವಾಮಿ.

"ಯುದ್ಧ ಮುಗಿಯುವ ವರೆಗೂ ರಾಷ್ಟ್ರೀಯ ಮುಖಂಡರನ್ನು ಚರ್ಚಿಲ್ ಬಿಡುಗಡೆ ಮಾಡುವುದಿಲ್ಲವಂತೆ (ಬಾತ್ಮಿ)" ....ಇಂಡಿಯಾದಲ್ಲಿನ ಯದ್ಧೋದ್ಯಮದ ದೃಷ್ಟಿಯಿಂದಲೇ ಇರಬೇಕು ಈ ಸಂಕಲ್ಪ.

✤ ✤ ✤

"ನಾನು ಎತ್ತಿಕೊಂಡಾಗಲೆಲ್ಲ ನಿಮ್ಮ ಮಗು ನಗುತ್ತೆ, ಪಾತಮ್ಮ".

"ನಾನೇನು ಮಾಡೋದು, ಸುಬ್ಬಮ್ಮನೋರೇ! ಈಗಿನಕಾಲದ ಮಕ್ಕಳಿಗೆ ಮರ್ಯಾದೆಯೇ ಇಲ್ಲ".

ದ್ವಾರಪಾಲಕ

ಕಚೇರಿ ಬಾಗಿಲಲಿ ತೂಕಡಿಸ ಇವನಾರು ?
ನರೆ ಮೀಸೆ ಮುದಿ ದಫೇದಾರ ನೇನು ?
ಬುರುಡೆಯನು ಕೆರೆಯುತ್ತ ತೂಕವಾಗೇಕಿಂತು ನಿಂತಿರುವೆ ?
ಬಡಪಾಯಿ ! ಮಾತನಾಡು !
ಮಂತ್ರಿಗಳು, ತಂತ್ರಿಗಳು, ಕಂತ್ರಿ ಸ್ವತಂತ್ರಿಗಳು
ನುಸುಳುವೀ ಹೊಸಲಲ್ಲಿ ಬಂದು ನೀನು
ಜಯವಿಜಯರಿಬ್ಬರೂ ಒಬ್ಬರಾದಂತೆ ಭೂ
ವೈಕುಂಠ ಬಾಗಿಲಲಿ ನಿಂತೆಯೇನು ?
ಕನ್ನಡದ ಕಡುಗಲೀ! ಯೌವನದ ಬಿಂಕದಲಿ
ಅರ್ಜಿ ಮಂದಿಯ ನೂಕಿ ಹೆಸರು ಪಡೆದೆ !
ಖದ್ದರನು ತೊಟ್ಟೀಗ ಜರಿಪೇಟವನ್ನು ಹೊತ್ತು
ಮೈ ಮರೆತ ಗೊರಕೆಯಲ್ಲಿಯೂ ನೆನೆವೆ ?
ಆಮಂತ್ರಿ ಆ ಆರ್‌ಸಿ ಆಐಜಿ ಆಡೀಸಿ
ಕೈತುಂಬ ಕೊಟ್ಟದ್ದು ನೆನೆವೆಯೇನು !
ನೀನೇ ಮುದ್ದಾಡಿಸಿದ ಸಾಹೆಬರ ಮಗನೀಗ
ನಿನಗೆ ಜುಲ್ಮಾನೆಯನು ಝಡಿದನೇನು ?
ಸುಮ್ನೆ ಸಂಬಳ ತಿಂಬ ಹಿಂಸಕರ ಸಾಲನ್ನು
ಮನದಿ ಮರುಕವನಾಂತು ಶಪಿಪೆ ಏನು ?
ನೀನು ಬಾಗಿಲ ಕಾಯುತಿದ್ದರೂ ಬೇಲಿಯದು
ಎದ್ದೆದ್ದು ಹೊಲವನ್ನು ತಿಂದಿತೇನು ?
ಹೇ ! ವೀರ ದಫೇಧಾರ ! ಕಚೇರಿ ಬಾಗಿಲಲಿ
ನೌಕರಿಯ ಡ್ರೆಸ್ಸಿನಿಂ ಸೆಟೆದು ನಿಲ್ಲು !
ಸಾಹೆಬರ ಹೃದಯದಲಿ ಕೆಚ್ಚೂರಿ ನೆಚ್ಚೂರಿ
ಲಂಚಕರ ವಂಚಕರ ಪವರ ಗೆಲ್ಲು !

— ಎಸ್. ಪಿ. ರೇವಣ್ಣ

ಭಾವಿಗೆ ಬಿದ್ದ ಸಾವಿತ್ರಿ ಬಾಯಿ

—— o ——

ಗೆರೆ ಹಾಕಿದರೆ ದಾಟುವುದಿಲ್ಲ, ಅಂತಾರೆ, ಗಂಡ ಹೆಂಡತಿ ಮಾತನ್ನು ಮೀರದೆ ಇದ್ದರೆ; ಆದರೆ, ನಮ್ಮ ಚಿಕ್ಕಮ್ಮ ಗೆರೆಹಾಕಬೇಕಾದ್ದು ಕೂಡ ಇಲ್ಲ. ಅಷ್ಟು ಪಳಗಿಸಿದ್ದಾಳೆ ಅವಳು ಚಿಕ್ಕಪ್ಪನನ್ನು. ಆ ಚಿಕ್ಕಪ್ಪನೋ ಬಲುಸಿಡುಕನಾಗಿದ್ದನಂತೆ. ಯದ್ವಾ ತದ್ವಾ ಮಾತಾಡುವನಂತೆ; ರೇಗಿಬೀಳುವನಂತೆ; ತನ್ನದೇ ಧೋರಣೆ, ತನ್ನದೇ ಧಾಟಿ ಅಂತ ಮೆರೆಯುವನಂತೆ. ಆದರೆ, ಎರಡೇ ಎರಡು ವರ್ಷದಲ್ಲಿ ಚಿಕ್ಕಮ್ಮ ಅವನಿಗೆ ಮೂಗುದಾರ ಬಿಗಿದು ಕತ್ತಿಗೆ ನೊಗ ಏರಿಸಿ ಸಾಧುಪ್ರಾಣಿ ಮಾಡಿ ಬಿಟ್ಟಿದ್ದಾಳೆ. ಮಹಿಳಾ ಸಮಾಜ ನಡೆಸಬೇಕಾದ್ದು ನಮ್ಮ ಚಿಕ್ಕಮ್ಮ. ಸಾವಿರಾರು ಹೆಣ್ಣುಮಕ್ಕಳ ಜೀವನವನ್ನು ಚಿಕ್ಕಮ್ಮ ಸುಸೂತ್ರ ಮಾಡಬಲ್ಲಳು. ನಮ್ಮ ಮನೆಯಲ್ಲೇ ನಾವುಗಳು ಎಂಟು ಹತ್ತು ಜನ ಚಿಕ್ಕವರಿದ್ದೇವೆ. ನಮಗೆಲ್ಲ ಚಿಕ್ಕಮ್ಮನೇ ಗುರು. ನಮ್ಮ ನಮ್ಮ ಗಂಡಂದಿರನ್ನು ಮುರಿಯುವುದಕ್ಕೆ ಉಪಯೋಗಿಸುತ್ತೇವೆ. ಅಂತ ಭರವಸೆ ಕೊಟ್ಟರೆ ಸಾಕು, ಚಿಕ್ಕಮ್ಮ ನಮಗೆಲ್ಲ ಒಂದೊಂದು ಉಪಾಯ ಹೇಳಿ ಕೊಡುತ್ತಾಳೆ. ಮೊನ್ನೆ ಹೀಗೆ ಯಾವುದೋ ಮಾತಿನ ಮಧ್ಯೆ ಚಿಕ್ಕಮ್ಮ ನನಗೊಂದು ಸಿತೂರಿ ಉಪದೇಶ ಮಾಡಿದಳು. ನನ್ನ ಅಕ್ಕತಂಗಿಯರಿಗೆ ಅನುಕೂಲವಾಗಲಿ ಅಂತ ನಾನು ಅದನ್ನು ಸ್ತ್ರೀ ನಾಮಧೇಯದ ಕೊರವಂಜಿಗೆ ಕಳುಹಿಸುತ್ತಿದ್ದೇನೆ.

ಆಗ ಚಿಕ್ಕಮ್ಮ ಚಿತ್ರದುರ್ಗದಲ್ಲಿದ್ದಳಂತೆ. ಚಿಕ್ಕಪ್ಪ ಅಲ್ಲೇ ಶಿರಸ್ತೆಯಾಗಿದ ನಂತೆ. ಚಿಕ್ಕಮ್ಮನ ಅಕ್ಕನಿಗೆ ಖಾಯಿಲೆ ಅಂತ ತಂತಿ ಬರುತ್ತಲೂ ಚಿಕ್ಕಮ್ಮ, ಬೆಂಗಳೂರಿಗೆ ಹೊರಟೇ ಬಿಡಬೇಕು ಅಂತ ಹಠ ಹಿಡಿದಳಂತೆ. ನೀವು ಬನ್ನಿ, ಅಂತ ಚಿಕ್ಕಮ್ಮ ಹೇಳಿದರೆ, ಚಿಕ್ಕಪ್ಪ, ಆಗ ಇನ್ನೂ ಸ್ವಪ್ರತಿಷ್ಠೆ ಬಹಳ, ಊಹೂಂ, ನೀನು ಬೇಕಾದರೆ ಹೋಗು, ಬಿಟ್ಟು ಬಸ್ಸಿನಲ್ಲಿ ಕೂರಿಸುತ್ತೇನೆ, ನಾನು ಬರುವುದಿಲ್ಲ, ಅಂದನಂತೆ. ಬಂದರೆ ಚೆನ್ನ, ಬರದೆ ಇರಬಾರದು, ಬಂದೇ ಬರಬೇಕು, ಹೆಣ್ಣು ಹೆಂಗಸು, ದೂರ ಬಹಳ, ದಂಪತಿಗಳು ಒಟ್ಟಿಗಿದ್ದರೆ ಲಕ್ಷಣ, ಅನ್ನ ಬೇಯಿಸುವುದಕ್ಕೆ ಚೆನ್ನಾಗಿ ಬರುವ ಗುಮಾಸ್ತೆಯೇ ಇಲ್ಲವಲ್ಲ ಇಲ್ಲಿ, ಅಂತ ಏನೇನೋ ಹೇಳಿ ನೋಡಿದಳಂತೆ ಚಿಕ್ಕಮ್ಮ. ಸರಿ, ಚಿಕ್ಕಪ್ಪನೂ ಅಟ್ಟಕ್ಕೇರಿದ. ಲೊಟ್ಟು, ಲೊಸ್ಕು ಸಾಹೇಬರು ಬರ್‍ತಾರೆ, ಮೈ ಹುಷಾರಿಲ್ಲ, ನಿನ್ನ ಮನೆಯಲ್ಲಿ ನನಗಾದ ಅವಮಾನವೇ ಸಾಕು, ಅಂತ ಹೀಗೆ ಮಾತು ಬೆಳೆಯಿತಂತೆ. ಕಡೆಗೆ, ನಾವೆಲ್ಲ ಈಗ ಮಾಡುವ ಹಾಗೇನೇ, ಚಿಕ್ಕಮ್ಮ ಗಂಡನ ಹತ್ತಿರ ಮಾತೇ ಬಿಟ್ಟಳು. ಎದುರಿಗೆ ಕಾಣಿಸಿಕೊಳ್ಳಲೇ ಇಲ್ಲ. ಅಡಿಗೆ ಕೆಡಿಸಿದಳು. ಬಿಸಿಬಿಸಿ ಬಡಿಸಿದಳು. ಪಾತ್ರೆಗಳನ್ನು ಕುಕ್ಕಿದಳು. ಅಡಿಗೆ ಮನೆಯಲ್ಲೇ ಮಲಗಿಕೊಂಡಳು.... ಊ ಹುಂ. ಚಿಕ್ಕಪ್ಪನೂ ಶಿರಸ್ತೇದಾರ್ ಬಿಗಿಮೇಲೆಯೇ ಕೂತಿದ್ದನಂತೆ.... ಒಂದು ದಿನವಾಯಿತು.... ಎರಡು ದಿನವಾಯಿತು.... ಚಿಕ್ಕಮ್ಮನಿಗೆ ಒಂದು ಉಪಾಯ ಹೊಳೆಯಿತಂತೆ. ಅದನ್ನೇ ನಾನು ಅಕ್ಕತಂಗಿಯರಿಗೆ ಹೇಳುತ್ತಿರುವುದು ಈಗ....

ಅಡಿಗೆ ಮನೆಯಲ್ಲೇ ಮಲಗಿದ್ದ ಚಿಕ್ಕಮ್ಮ ಸುಮಾರು ಒಂದೂವರೆಗಂಟೆಗೆ ಬೆಡ್ರೂಮಿನ ಹೊರಬಾಗಿಲ ಆಚೆಬಂದು, ಆ ಬಾಗಿಲನ್ನು ಉಗುರಿಂದ ಗರಗರಗರ ಗರಗರಗರ ಗರಗರಗರ ಅಂತ ಕೆರೆದಳಂತೆ. ಒಳಗೆ ಚಿಕ್ಕಪ್ಪನಿಗೆ ಎಚ್ಚರವಾಯಿತು. ಗಾಬರಿಯೇ ಗಾಬರಿ, ಪಿಶಾಚಿ, ಅಂತ. ಎದುರುಮನೆ ಭಾವೀಲಿ ಗಂಡ ಹೊಡೆದ ಅಂತ ಅವರ ಸೊಸೆ ಬಿದ್ದು ಇನ್ನೂ ಎಂಟು ದಿನ ಆಗಲಿಲ್ಲ.... "ಗರ ಗರ ಗರ...." ಯಾರು ಅಂತ ಕಿರಿಚುವುದಕ್ಕೂ ಚಿಕ್ಕಪ್ಪನಿಗೆ ನಾಲಗೆ ಏಳಲಿಲ್ಲ. ದಿಗಿಲೋ ದಿಗಿಲು ! ಚಿಕ್ಕಮ್ಮ ಕೆರೆಯುತ್ತಾನೇ ಇದ್ದಳಂತೆ.... ಕೊಂಚ ಹೊತ್ತಾದ ಮೇಲೆ, ಒಳಗಿಂದ ಗಾಯತ್ರಿ ಜಪ ಕೇಳಿಸಿತಂತೆ ಸರಿ ! ಈ ಪ್ರಾಣಿ ಪಿಶಾಚಿಗೆ ಹೆದರುತ್ತೆ ಅಂತ ಚಿಕ್ಕಮ್ಮ ಧೈರ್ಯ ಮಾಡಿಕೊಂಡಳಂತೆ. ಮೆಲ್ಲಗೆ ಹೋಗಿ ಅಡಿಗೆ ಮನೆಯಲ್ಲೇ ಮಲಗಿ ಕೊಂಡಳಂತೆ. ಬೆಳಗ್ಗೆ ಎದ್ದಾಗ ಚಿಕ್ಕಪ್ಪನ ಮುಖ ಸುಕ್ಕಿ ಹೋಗಿತ್ತಂತೆ. ಚಿಕ್ಕಮ್ಮನಿಗೆ ಅಯ್ಯೋ ಎನಿಸಲಿಲ್ಲವಂತೆ. ಅವತ್ತೂನೂ ಆ ಗಂಡು ಚಿಕ್ಕಮ್ಮನ ಹತ್ತಿರ ತುಟಿ ಪಿಟಕ್ಕೆನ್ನಲಿಲ್ಲ. ರೇಗಿಕೊಂಡೇ ಓಡಾಡುತ್ತಿತ್ತಂತೆ. ಬೆಂಗಳೂರು ಪ್ರಯಾಣದ ಮಾತೇ ಇಲ್ಲವಂತೆ. ರಾತ್ರಿ ಮಾತ್ರ, ಮಲಗುವುದಕ್ಕೆ ಮುಂಚೆ ತಲೆ ದಿಂಬಿನಕೆಳಗೆ ಭಗವದ್ಗೀತೆ ಪುಸ್ತಕ ಇಟ್ಟನಂತೆ. ಬಹಳ ಹೊತ್ತು ದೀಪ ಉರಿಸಿ ಕೊಂಡು ಪೇಪರೋದುತ್ತಿದ್ದನಂತೆ. ಶನಿವಾರದ ಬ್ರಹ್ಮಗಂಟು ಹಿಡಿದುಕೊಂಡೇ ಚಿಕ್ಕಪ್ಪ ಮಲಗಿದನಂತೆ.... ಆದರೆ, ಚಿಕ್ಕಮ್ಮನಿಗೆ ಏನು ಹೆದರಿಕೆ ? ರಾತ್ರಿ ಮೂರು ಘಂಟೆಗೆ ಸರಿಯಾಗಿ ಅವಳು ಎದ್ದು ಬಾಗಿಲು ಕೆರೆದಳಂತೆ. ಕೀಚಲು ದನಿಯಲ್ಲಿ "ಓ" ಎಂದು ಕೂಗಿದಳಂತೆ.

ಚಿಕ್ಕಪ್ಪ ಒಳಗಿಂದ "ಚಾಮುಂಡೇಶ್ವರೀ ! ಕಾಪಾಡು !" ಎಂದು ಗಾಬರಿ ಗಾಬರಿಯಾಗಿ ಕೂಗಿದನಂತೆ. "ನೀನು ಯಾರು ?" ಎಂದು ಕೇಳಿದನಂತೆ. ಚಿಕ್ಕಪ್ಪನಿಗೆ ಚಿಲಕ ತೆಗೆಯುವುದಕ್ಕೆ ಹೆದರಿಕೆ. ಅಡಿಗೆ ಮನೆಗೆ ಹೋಗಿ ಚಿಕ್ಕಮ್ಮನನ್ನು ಕೂಗೋಣ ಅಂದರೆ ಅದಕ್ಕೂ ಭಯ !

ಚಿಕ್ಕಮ್ಮ ಹೊರಗಿನಿಂದ, "ನಾನು ಸಾವಿತ್ರಿ ಬಾಯಿ !" ಅಂದಳಂತೆ, ಅದೇ ಆ ಸೊಸೆಯ ಹೆಸರು. ಚಿಕ್ಕಪ್ಪ ಒಳಗಿಂದ "ಅಯ್ಯೋ ! ಪಿಶಾಚಿ ಪಿಶಾಚಿ ದೇವರೇ ಕಾಪಾಡು" ಎಂದು ಹಣೆ ಬಡಿದರಂತೆ. ಆಗ ಚಿಕ್ಕಮ್ಮ "ಗಂಡ ಹೆಂಡತಿ ಜಗಳ ಆಡಿದರೆ ಭಾವಿಯೊಳಕ್ಕೆ ನಿನ್ನನ್ನು ಎಳೆದು ಬಿಡುತ್ತೇನೆ. ಹುಷಾರ್ !" ಅಂತ ಚೀರಿದಳಂತೆ. ಬಾಗಿಲನ್ನು ಬಡಬಡ ಅಂತ ನಾಲ್ಕೆಂಟು ಸಾರಿ ಬಡಿದು, ಬೇಗ ಹೋಗಿ ಮಲಗಿ ಕೊಂಡಳಂತೆ.

ಚಿಕ್ಕಪ್ಪ ಬೆವರೊರಸಿಕೊಂಡು, ಬೆಂಕಿ ಕಡ್ಡಿ ಗೀಚಿ, ದೀಪ ಹತ್ತಿಸಿ ಮೆಲ್ಲಗೆ ಅಡಿಗೆ ಮನೆಕಡೆ ಬಂದರಂತೆ.... "ಸರಸೂ.... ಸರಸೂ...." ಅಂತ ನಾಲ್ಕು ಸಲ ಕೂಗಿದ ಮೇಲೆ ಚಿಕ್ಕಮ್ಮ ಗೊರಕೆ ನಿಲ್ಲಿಸಿದಳಂತೆ.

ಬೆಳಗಿನ ಬಸ್ಸಿಗೇನೆ ಇಬ್ಬರೂ ಮುಂದಿನ ಸೀಟಿನಲ್ಲಿ ಒಟ್ಟಿಗೆ ಕೂತು ಬೆಂಗಳೂರಿಗೆ ಹೊರಟರಂತೆ.

—ಶ್ರೀ ರುದ್ರಮ್ಮ

ಬಾಲಬೋಧೆ

ಕನ್ನಡ ಬಾಲಬೋಧೆಯನ್ನು ಕಾಲೇಜಿಗೆ ಪಠ್ಯ ಪುಸ್ತಕವನ್ನಾಗಿ ನಿಯಮಿಸಿ ರೆಂದು ಯಾರಾದರೂ ಸೂಚಿಸಿದರೆ ಅಂದು ಕನ್ನಡ ನಾಡಿನಲ್ಲಿ ಭಾರೀ ಕ್ರಾಂತಿಯಾಗಿ ಹೋದೀತು. ಆರೀತಿ ಹೇಳಿದವನನ್ನು ತಡಮಾಡದೆ ಹುಚ್ಚಾಸ್ಪತ್ರೆಗೆ ಸೇರಿಸಿಯಾರು. ಕಾಲೇಜು ಹುಡುಗರು ಸುಖದ ದಿನಗಳು ಬಂದವೆಂದು ಕಾಸಿನವೆಪ್ಪರಮೆಂಟು ಕೊಂಡು ತಿಂದಾರು. ಆದರೂ ತಾವು ಕೋಪತಾಪಗಳಿಗೆ ಎಡೆಕೊಡದೆ ಸಾವಧಾನವಾಗಿ ಒಂದು ಬಾಲಬೋಧೆಯನ್ನು ಕೊಂಡು ತಂದು ನಾಚಿಕೆ ಪಡದೆ ಓದಿ. ಆಗ ಅದರಲ್ಲಿ ಅಡಗಿರುವ ಘನವಾದ ತತ್ವಗಳನ್ನು ನೀವೇ ಮನಗಾಣುವಿರಿ. ಬಾಲಬೋಧೆಯು ಆಗ ನಿಮಗೆ ಭಗವದ್ಗೀತೆಯಾಗಿ ತೋರುವುದು. ಮುಖ್ಯ ಬೇಕಾದುದು ಸಹನೆ. ನಿಮಗೆ ನಂಬಿಕೆ ಬರಲು ಕೆಲವುಮಾತ್ರ ಉದಾಹರಣೆಗಳನ್ನು ಕೊಡುತ್ತೇನೆ.

" ಆಗ ಆ ಆಟ—ಈಗ ಈ ಆಟ "

ಶ್ರೀ ಶಂಕರಾಚಾರ್ಯರು ಹೇಳಿದರು 'ಬಾಲಸ್ತಾವತ್ ಕ್ರೀಡಾಸಕ್ತಃ ತರುಣಸ್ತಾವತ್ ತರುಣೀಸಕ್ತಃ ವೃದ್ಧಸ್ತಾವತ್ ಚಿಂತಾಸಕ್ತಃ ಪರಬ್ರಹ್ಮಣಿ ಕೋಪಿನಸಕ್ತಃ' ಶಂಕರಾಚಾರ್ಯರು ಇಷ್ಟು ಪದಗಳನ್ನು ಅದರಲ್ಲೂ ಸಂಸ್ಕೃತ ಪದಗಳನ್ನು ಖರ್ಚು ಮಾಡಿ ಪಂಡಿತರಿಗೆ ಮಾತ್ರ ವೇದಾಂತವನ್ನು ಉಪದೇಶಿಸಿದರು. ಪಂಡಿತರು 'ಭಲೆ ಭೇಷ್! ಏನು ಹೇಳಿದರಯ್ಯ' ಎಂದು ತಾವೇ ಹೇಳಿದವರಂತೆ ಬೆನ್ನ ಚಪ್ಪರಿಸಿ ಕೊಂಡು ಸುಮ್ಮನಾದರು. ಆದರೆ ಬಾಲಬೋಧೆಯಲ್ಲಿ ಎರಡೇ ಮಾತಿನಲ್ಲಿ ಅದೇ ತತ್ವವನ್ನು ಪಂಡಿತ ಪಾಮರರಿಬ್ಬರಿಗೂ ತಿಳಿಯುವಂತೆ ಎಷ್ಟು ಸುಲಭವಾಗಿ ಅಡಗಿಸಿದ್ದಾರೆ! ಅದೇ ಶಂಕರಾಚಾರ್ಯರು ಸುಲಭವಾಗಿ 'ಆಗ ಆ ಆಟ ಈಗ ಈ ಆಟ' ಎಂದು ಹೇಳಿದ್ದರೆ ಅವರನ್ನು ಹುಚ್ಚುಸನ್ಯಾಸಿ ಪಟ್ಟಕ್ಕೆ ಸೇರಿಸುತ್ತಿದ್ದರು. ಯಾವಾಗ ಯಾವ ಆಟವೆಂದು ಮಕ್ಕಳಿಗೆ ಹೇಳಿಕೊಡುವುದರಲ್ಲಿ ಅರ್ಥವಿಲ್ಲ. ಅವರಿಗೆ ಯಾವಾಗಲೂ ಒಂದೇ ಆಟ— ಗೋಲಿ, ಬುಗರಿ ಇತ್ಯಾದಿ. ಅದನ್ನೇ ಕಾಲೇಜು ಪ್ರೌಢ ವಿದ್ಯಾರ್ಥಿಗಳಿಗೆ ಹೇಳಿದ್ದರೆ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಿದ್ದರು. ಮತ್ತು ಸಿನಿಮಾಗಳಿಗೆ ಇನ್ನೂ ಹೆಚ್ಚಾಗಿ ಹೋಗುತ್ತಿದ್ದರು. ಆದರೆ ಅದನ್ನು ಓದಿ ಆ ಪುಸ್ತಕದಲ್ಲಿ ಬರೀ ಆಟಗಳ ವಿಷಯವೇ ಬರೆದಿದ್ದಾರೆಂದು ತಿಳಿಯಬಾರದು. ಹಾಗೆ ಬರೆದಿದ್ದರೆ ಬಹಳ ಜನ ಹುಡುಗರು ವಿದ್ಯಾವಂತರಾಗುತ್ತಿದ್ದರು.

" ಅಪ್ಪಬಂದ ಕಬ್ಬು ತಂದ, ಈ ಕಬ್ಬು ಸಿಹಿ. "

ಆಹಾ! ಎಂಥ ರತ್ನದಂತಹ ಮಾತುಗಳಿವು. ಮನೆಬಿಟ್ಟು ಹೊರಗೆ ಹೋದ ಅಪ್ಪನು ಪುನಃ ಸಾಯಂಕಾಲದ ಹೊತ್ತಿಗೆ ಮಿಲಿಟರಿ ಮೋಟರುಗಳು, ಜಟಕಾ ಗಾಡಿಗಳು, ಸಾಲಗಾರರು, ಇವುರುಗಳಿಂದ ತಪ್ಪಿಸಿಕೊಂಡು ಜೀವಸಹಿತವಾಗಿ ಮನೆ

ಸೇರುವುದೇ ಅಪರೂಪ. ಇಂತಹ ಸನ್ನಿವೇಶದಲ್ಲಿ ಅಪ್ಪ ಬಂದರೆ ಎಷ್ಟು ಸಂತೋಷವಾಗಲಿಕ್ಕಿಲ್ಲ! ಅದಕ್ಕೇ ಎಷ್ಟೋ ಜನ 'ಎಲ್ಲಿರುವೆ ತಂದೆ ಬಾರೊ' ಎಂದು ಕೂಗುವುದು. ಆ ಅಪ್ಪನು ಸುಮ್ಮನೇ ಬರೀ ಕೈ ಆಡಿಸಿಕೊಂಡು ಮನೆಗೆ ಬಂದನೇ? ಇಲ್ಲ. ಕಬ್ಬು ತಂದನು. ಅಪ್ಪನು ಮನೆಗೆ ಬರುವಾಗ ಬಿದ್ದುಹೋದ ದೇವಸ್ಥಾನದ ಇಟ್ಟಿಗೆಯನ್ನೋ ಪಕ್ಕದಮನೆಯ ಒಂದು ಹೆಂಚನ್ನೋ ಕದ್ದು ತರಲಿಲ್ಲ. ಬರೀ ಕಬ್ಬು ತಂದನು. ಆದರೆ ಈ ವಾಕ್ಯಗಳಲ್ಲಿ ತುಂಬಿರುವ ಮಹಾಸತ್ಯವನ್ನು ನೋಡಿ. ಈ ಕಬ್ಬು ಸಪ್ಪೆ. ಆ ಅಪ್ಪನ ಕುಮಾರರೆಲ್ಲಾ ನುಗ್ಗಿ ನಾ ಮುಂದು ನೀ ಮುಂದು ಎಂದು ಅಪ್ಪನು ತಂದ ಕಬ್ಬನ್ನು ಖಾಲೀ ಮಾಡುವರು. ಕಬ್ಬನ್ನು ತಿಂದು ಧ್ವಂಸ ಮಾಡಿ ಅಪ್ಪನಿಗೆ ಕೊಡುವ ಸರ್ಟಿಫಿಕೇಟ್ 'ಈ ಕಬ್ಬು ಸಪ್ಪೆ' ಈ ತರಹೆಯ ಸತ್ಯವನ್ನು ನುಡಿಯುವ ಧೈರ್ಯ ನಮ್ಮಲ್ಲಿ ಎಷ್ಟು ಜನರಿಗಿದೆ? ಯಾರ ಮನೆಗಾದರೂ ಊಟಕ್ಕೆ ಹೋದಾಗ ಅಡಿಗೆ ರುಚಿಯಿಲ್ಲದೆ ಹೋದರೂ ಕೂಡ ಧೈರ್ಯವಾಗಿ 'ಈ ಅಡಿಗೆ ಚೆನ್ನಾಗಿಲ್ಲ' ಎಂದು ಹೇಳುವ ಸ್ಥೈರ್ಯ ನಮ್ಮಲ್ಲಿಲ್ಲ. ಉಪನ್ಯಾಸಕಾರರು ನಿಂತು ಸುಳ್ಳಿನ ಕಂತೆಗಳನ್ನು ಉರುಳಿಸುತ್ತಿದ್ದರೂ 'ಇದು ಶುದ್ಧ ಸುಳ್ಳು' ಎಂದು ನುಡಿಯುವ ಗಂಡೆದೆ ನಮಗಿಲ್ಲ. ನಾವು ಹೇಡಿಗಳಾಗುತ್ತಿರುವೆವು. ಆದರೆ ಬಾಲ ಬೋಧೆಯಲ್ಲೇ 'ಈ ಕಬ್ಬು ಸಪ್ಪೆ' ಎಂದು ನಿರ್ದಾಕ್ಷಣ್ಯವಾಗಿ ಸತ್ಯದ ಮೊದಲು ಪಾಠವನ್ನು ನಮಗೆ ಹೇಳಿಕೊಡುತ್ತಿದ್ದರೂ ನಮ್ಮ ಲಕ್ಷ್ಯವು ಅತ್ತಕಡೆಗಿಲ್ಲ. ತಾಯಿ ತಂದೆ ಯಾರಾಗಲೀ ಸತ್ಯದ ಮುಂದೆ ಅವರ ಶಕ್ತಿಗುಂದುವುದು. ಅದಕ್ಕಾಗಿಯೇ ಆ ಸಪ್ಪೆ ಕಬ್ಬನ್ನು ತಂದವನು ಅಪ್ಪನೆಂದು ಆರೋಪಿಸಿದ್ದಾರೆ. ಇಂತಹ ವಿಚಾರ ಪರಿಪೂತ ಪುಸ್ತಕವನ್ನು ಸುಳ್ಳು ಅರಿಯದ ಬಾಲಕರಿಂದ ಓದಿಸಿ ಏನು ಪ್ರಯೋಜನ? ಕಾಲೇಜು ಹುಡುಗರಿಂದ ಓದಿಸಿದರೆ ಅವರಿಗೆ ಧೈರ್ಯವಾಗಿ ಸತ್ಯವನ್ನು ನುಡಿಯುವ ಒಂದು ತತ್ವವನ್ನು ಉಪದೇಶಿಸಿದಂತಾಗುವುದು. ದೇಶದ ಪುರೋಭಿವೃದ್ಧಿಗೆ ಸಹಾಯ ಮಾಡಿದಂತಾಗುವುದು. ಈತತ್ವದ ಸಾರವನ್ನೇ ಮಹಾತ್ಮರು ಜಗತ್ತಿಗೇ ಸಾರಿಹೇಳುತ್ತಿರುವರು. ಪಠ್ಯ ಪುಸ್ತಕ ಕಮಿಟಿಯವರು ಈಕಡೆ ಗಮನ ಕೊಡುವರೇ?

ಅಯ್ಯಾ, ಕಾಯಿಪಲ್ಯ ತಂದೆಯಾ? ಜಗಳವಾಡಬೇಡ, ಅಗೋ ಅಲ್ಲಿ ಒಂದು ನಕ್ಷತ್ರ

ಮನೆಯವನೊಬ್ಬನನ್ನು ತರಕಾರಿ ತರಲು ಮಾರ್ಕೆಟ್ಟಿಗೆ ಕಳುಹಿಸಿರುವರು. ಅವನು ಬಹಳ ಹೊತ್ತಿನಮೇಲೆ ಮನೆಗೆ ವಾಪ್ಸು ಬಂದಿರುವನು. ನೋಡಿದರೆ ಬರೀ ಕೈಲಿಬಂದ ಹಾಗೆ ಕಾಣಿಸುತ್ತಿದೆ. ಕೊಟ್ಟ ದುಡ್ಡೂ ಸಹಾ ತಿಂದು ಹಾಕಿರಬಹುದು. ಮಾತನ್ನಾಡಿಸಿದರೆ ಮೇಲೆ ಬೀಳುವುದಕ್ಕೆ ಬರುತ್ತಾನೆ. ಇಕ್ಕಟ್ಟಿನ ಸನ್ನಿವೇಶ. ಈಗ ಅವನಿಂದ ಏಟುತಿನ್ನದೆ, ಮೆಲ್ಲಗೆ ದುಡ್ಡು ಹೇಗೆ ಹಾಳುಮಾಡಿದ್ದಾನೆ ಎಂಬ ವಿಶಯಗ್ರಹಣ ಮಾಡಬೇಕು. ನಮ್ಮ ನಿಮ್ಮಿಂದ ಅದು ಸಾಧ್ಯವೇ. ನಾವೇನಾದರೂ ಲೋ ಪೋಕರಿ, ತರಕಾರಿ ತೆಗೆದುಕೊಂಡು ಬಾ ಎಂದು ದುಡ್ಡುಕೊಟ್ಟರೆ ಮಸಾಲೆ ದೋಸೆ ತಿಂದು ಬರೀ ಕೈಲಿ ಬಂದಿದ್ದೀಯೇ ಪಾಪಿ. ಎಂದೆವೋ ನಮ್ಮಿಂದು ಅವಯುವ

ವನ್ನು ಅವನು ಊನಮಾಡುತ್ತಾನೆ. ಆದರೆ ಬಾಲಬೋಧೆಯಲ್ಲೇ ಮುಂದೆ ಅಂತಹ ಸನ್ನಿವೇಶಗಳು ಉದ್ಭವಿಸಬಹುದು ಎಂದು ಆ ಸಮಸ್ಯಾಪರಿಹಾರವನ್ನೂ ಸುಲಭವಾಗಿ ಸೂಚಿಸಿದ್ದಾರೆ. 'ಅಯ್ಯಾ ಕಾಯಿ ಪಲ್ಯ ತಂದೆಯಾ !' ಎಂದು ನೋಡಿದರೂ ನೋಡದಿದ್ದ ಹಾಗೆ ಕೇಳಬೇಕು. ಗೊತ್ತೇಇದೆ ಅವನು ಜಗಳಕ್ಕೆ ಬರುತ್ತಾನೆ. ಆಗ ಮೃದುವಾಗಿ ಹೇಳಬೇಕು 'ಜಗಳವಾಡಬೇಡ ಅಗೋ ಅಲ್ಲಿ ಒಂದು ನಕ್ಷತ್ರ. ಆಗ ಅದು ಹೀಗೆ ಹೇಳಿದ ಹಾಗಾಗುತ್ತದೆ. ಅಪ್ಪಾ ಈ ಪ್ರಪಂಚವು ನಮಗೆ ಶಾಶ್ವತವಲ್ಲ. ನಾನೂ ನೀನೂ ಎಲ್ಲರೂ ಒಂದು ದಿನ ಸಾಯಬೇಕು, ಸತ್ತಮೇಲೆ ಆರೀತಿ ನಕ್ಷತ್ರಗಳಾಗಿ ಪ್ರಕಾಶಿಸುವೆವು. ಆದುದರಿಂದ ಸುಮ್ಮನೆ ಜಗಳ ವಾಡಿ ಇಹಪರಗಳನ್ನು ಯಾತಕ್ಕೆ ಹಾಳುಮಾಡಿಕೊಳ್ಳುತ್ತೀಯೆ ? ಸುಮ್ಮನೆ ಒಳ್ಳೆಯ ಮಾತುಗಳಲ್ಲಿ ದುಡ್ಡನ್ನು ಇಂತಿಂಥಾ ಪದಾರ್ಥಗಳಿಗೆ ಉಪಯೋಗಿಸಿದೆ ಎಂದು ಹೇಳಿದರೆ ಸಾಕು. ಸುಮ್ಮನೆ ಜಗಳವಾಡಿ ಹೊಡೆದಾಡಿ ಇಬ್ಬರೂ ಸತ್ತು ಈಗಲೇ ನಕ್ಷತ್ರಗಳಾಗುವುದು ಬೇಡ' ಎಂದು ಅಹಿಂಸಾ ಮಾರ್ಗ ದರ್ಶನ ಮಾಡುವುದು ಉತ್ತಮ. ಇಂತಹ ಸನ್ನಿವೇಶಗಳನ್ನು ಪ್ರತಿದಿನವೂ ಎದುರಿಸಬೇಕಾದ ಪ್ರೌಢ ವಿದ್ಯಾರ್ಥಿಗಳು ಈ ಬಾಲಬೋಧೆಯನ್ನು ಓದುವುದನ್ನು ಬಿಟ್ಟು ಚಿಕ್ಕಮಕ್ಕಳು ಓದಿ ಏನು ತಿಳಿದುಕೊಂಡಾರು. ಓದುಗರೇ ! ನೀವಾದರೂ ಈ ವಿಷಯದಲ್ಲಿ ಚಳುವಳಿ ಹೂಡಬಾರದೇ ?

" ಅವನು ಒಬ್ಬ ಮನುಷ್ಯ—ಇದು ಒಂದು ಕತ್ತಿ "

ಎಂತಹ ಘನವಾದ ತತ್ವವನ್ನು ಪ್ರತಿಪಾದಿಸುವ ಸೊಗಸಾದ ವಾಕ್ಯಗಳಿವು ! ಈಗಲೂ ಎಷ್ಟೋ ಘನ ವಿದ್ವಾಂಸರಿಗೆ ಮನುಷ್ಯ ಮತ್ತು ಕತ್ತಿಗಳಲ್ಲಿ ವ್ಯತ್ಯಾಸ ಗೊತ್ತಿಲ್ಲ. ಎಷ್ಟೋಸಲ ಅವರು ತಮ್ಮ ಮಕ್ಕಳನ್ನೇ 'ಕತ್ತೆ, ಇದು ಯಾಕೋ ಹೀಗೆ ಮಾಡಿದೆ' ಎಂದು ಕೇಳುತ್ತಾರೆ. ಆದರೆ ಬಾಲಬೋಧೆಯಲ್ಲಿ ಬಹಳ ಸುಲಭ ವಾಗಿ ಇಂತಹವನೇ ಮನುಷ್ಯ ಇಂತಹುದೇ ಕತ್ತಿ ಎಂದು ತಿಳಿಹೇಳಿದ್ದಾರೆ. ಮನುಷ್ಯ ರಲ್ಲೇ ಎಷ್ಟೋಸಲ ನಮಗೆ ಕತ್ತೇ ಮಾದರಿಗಳು ಕಂಡು ಬರುವುವು. ಜೀವರಾಶಿಗಳ ವ್ಯತ್ಯಾಸಗಳನ್ನು ಸಹ ಕೇವಲ ಚಿಕ್ಕ ಬಾಲಬೋಧೆಯಲ್ಲೇ ಹೇಳಿಕೊಡುವಾಗ ನಾವು ಸುಮ್ಮನೆ ದಪ್ಪ ಪುಸ್ತಕಗಳನ್ನು ಓದಿ ಅರ್ಥ ಮಾಡಿಕೊಳ್ಳದೇ ತಲೆಕೆಡಿಸಿ ಕೊಳ್ಳುವ ಉದ್ದಿಶ್ಯವಾದರೂ ಏನು ?

ಅಣ್ಣಗಳಿರಾ ! ನಾನು ಹೆಚ್ಚು ಹೇಳಲು ಬಯಸುವುದಿಲ್ಲ. ಬಾಲಬೋಧೆಯ ಪ್ರತಿಯೊಂದು ಮಾತಿನಲ್ಲೂ ಪದದಲ್ಲೂ ಸಹ ಘನವಾದ ತತ್ವಗಳನ್ನೂ ಗೂಢಾರ್ಥ ಗಳನ್ನು ಅಡಗಿಸಿರುವಾಗ ಪ್ರತಿದಿನವೂ ನಾವು ಭಗವದ್ಗೀತೆಯ ಬದಲಾಗಿ ಬಾಲ ಬೋಧೆಯನ್ನೇ ಯಾಕೆ ಪಾರಾಯಣ ಮಾಡಬಾರದು ? ವಿಶ್ವವಿದ್ಯಾನಿಲಯಗಳಲ್ಲಿ **ಡಾಂಟೆ, ಕಾಂಟ್ ಇವರ ಪುಸ್ತಕಗಳ ಜಾಗದಲ್ಲಿ ಸುಲಭಬೆಲೆಗೆ ಸಿಕ್ಕುವ ಬಾಲಬೋಧೆ**

ಯನ್ನು ಯಾತಕ್ಕೆ ಪಠ್ಯ ಪುಸ್ತಕವನ್ನಾಗಿ ನಿಯಮಿಸಬಾರದು ? ಭಾರತವರ್ಷದ ಮನೆ ಮನೆಗಳಲ್ಲಿ ಬಾಲಬೋಧೆಯು ಆಯಾ ಭಾಷೆಗಳಲ್ಲಿ ಸರ್ವರಿಂದ ಪಠಿತವಾಗಿ ನಮಗೆ ಸ್ವರಾಜ್ಯದ ದಾರಿಯನ್ನು ಬಹಳ ಹತ್ತಿರದಲ್ಲೇ ತೋರಿಸಲೆಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ. ಭಗವಂತನು ನಿಮಗೂ ಸಹಾ ಬಾಲಬೋಧೆಯನ್ನು ಓದುವ ಸದ್ಬುದ್ಧಿಯನ್ನಿತ್ತು ಆಯುಸ್ಸಕೊಟ್ಟು ಕಾಪಾಡಲಿ.

— ಸೂಲಿಬೆಲೆ

— o —

ಕ್ಷಮೆ ಕೇಳಬೇಕಾದ ಸಂದರ್ಭಗಳು

೧ "ಮಹಾತ್ಮಾ ಗಾಂಧಿಯವರ ಹತ್ತಿರ ಐದು ನಿಮಿಷಗಳಕಾಲ ಕೂಡ ನಗದೆ ಕೂತಿರಲು ಸಾಧ್ಯವಿಲ್ಲ" (ಗೆಲ್ಡರ್‌ರವರ ಲೇಖನವೊಂದರಲ್ಲಿ)

\+ + +

೨ "ಆಸ್ಟ್ರೇಲಿಯನರಿಗೆ ಇಂಡಿಯಾ ವಿಷಯ ಏನೂ ತಿಳಿಯದು. ಅಲ್ಲಿ ಸರ್ಕಾರಿ ಚಾಕರಿಯಲ್ಲಿ ಒಬ್ಬರೇ ಒಬ್ಬರು ಭಾರತೀಯರಿದ್ದಾರೆ. ಅವರು ಮದ್ರಾಸಿನವರು." (ಲಾಲಾರಾಮ ರತನ್ ಗುಪ್ತರವರ ಹೇಳಿಕೆ) (ಪತ್ರಿಕೆ)

\+ + +

೩ "ಸರ್ ರಾಮಸ್ವಾಮಿ ಮೊದಲಿಯಾರವರು ಭಾಷಣ ಮುಗಿಸಿದಾಗ ಸಭೆ ಹರ್ಷಧ್ವನಿಯಿಂದ ತುಂಬಿತು" (ಬಾತ್ಮಿ)

\+ + +

೪ "....ಶ್ರೀ ಲಕ್ಷ್ಮಿಯನ್ನು.... .... ವೆಂಕಟರಾಮಯ್ಯನಿಗೆ 'ಕೊಟ್ಟು' .... ವಿವಾಹ ಮಹೋತ್ಸವ ನೆರವೇರಬೇಕೆಂದು 'ಗುರುಹಿರಿಯರು' ನಿಶ್ಚಯಿಸಿರುವುದರಿಂದ.... ...."

\+ +

೫ ಇನ್ನು ಮುಂದೆ ಜಗತ್ತನ್ನು ಬ್ರಿಟಿಷ್, ಅಮೆರಿಕಾ, ರಷ್ಯ ಎಂಬ ಪಂಚ ಮಹಾ ಶಕ್ತರೇ ವಿಂಗಡಿಸಿಕೊಂಡು ಆಳುತ್ತಾರೆ." (ಬಾತ್ಮಿ)

\+ +

೬ ರೇಡಿಯೋ ಆಫೀಸಿನಿಂದ, "ಇದುವರೆಗೂ ನೀವು ಕೇಳುತ್ತಿದ್ದದ್ದು ವಿದ್ವಾನ್ ....ರವರ ಸಂಗೀತ"

ಗೊತ್ತಾಯ್ತೋ ನಾ ಹೇಳಿದ್ದು

ಹೇಗಿದ್ದರೂ ರಜ, ಸುಬ್ಬಯ್ಯನನ್ನ ನೋಡಿಕೊಂಡು ಬರೋಣ ಎಂದು ಅವನ ಮನೆಗೆ ಸಾಯಂಕಾಲ ಆರು ಗಂಟೆಗೆ ಹೋದೆ. 'ಬನ್ನಿ ಒಳಗೆ ಇದ್ದಾರೆ' ಎಂದು ಅವನ ಹೆಂಡತಿ ನನ್ನನ್ನು ಕರೆದು ಅವನ ಕೊಠಡಿಯನ್ನು ಸೂಚಿಸಿದಳು. ಹಾಗೆಯೇ 'ಯಥಾಪ್ರಕಾರ ಒಬ್ಬ ಜ್ಯೋತಿಷಿಯನ್ನು ಎದುರು ಹಾಕಿಕೊಂಡಿದ್ದಾರೆ' ಎಂದೂ ಅಂದಳು.

ಸುಬ್ಬಯ್ಯನ ಮದುವೆಯಲ್ಲಿ ನಾನು ಗಿಳಿಯು. ಅಂದಮೇಲೆ ಆಗಿನಿಂದ ಆ ಮನೆಯಲ್ಲಿ ನಾನು ಒಬ್ಬ ವೈದುನ. ಅದಕ್ಕೇ ಇಷ್ಟು ಸಲಿಗೆ ಆ ಮನೆಯಲ್ಲಿ.

ಒಳಗೆ ಹೋಗಿ ಕೂತುಕೊಂಡೆ. ಕೂತುಕೊ ಬಾ ಎಂದು ಸುಬ್ಬಯ್ಯ ಹೇಳಿ. ತನ್ನ ಪಾಡಿಗೆ ತಾನು ಜೋತಿಷ್ಯನಿಗೆ ಕೈ, ಜಾತಕ ತೋರಿಸಿ ನೀವು ಕೊಡುವ ದುಡ್ಡಿನ ಪ್ರಮಾಣದಷ್ಟು ಅವಲಕ್ಷಣ ಎಂದೆನಿಸಿಕೊಳ್ಳುತ್ತಿದ್ದ. ಮೂರು ಮಾತು ಗಳಿಗೊಮ್ಮೆ ಜ್ಯೋತಿಷ್ಯನು "ಗೊತ್ತಾಯ್ತೋ ನಾ ಹೇಳಿದ್ದು" ಎಂದು ಪಲ್ಲವಿ ಹಾಡುತ್ತಿದ್ದ. ನನಗೇನೂ ಗೊತ್ತಾಗುತ್ತಿರಲಿಲ್ಲ. ಸುಬ್ಬಯ್ಯನಿಗೂ ಅಷ್ಟೇ ಎಂದು ನನ್ನ ನಂಬಿಕೆ. ಆದರವನು ಹೂ ಎನ್ನುವಂತೆ ತಲೆಯಾಡಿಸುತ್ತಿದ್ದನು.

ನೀವೆನ್ನಬಹುದು, ಅಂತಹುದೇನು ಜ್ಯೋತಿಷ್ಯ ಹೇಳಿದ್ದು ಅರ್ಥವಾಗದೇ ಇರುವಂತಹದು ಎಂದು. ಉದಾಹರಣೆಗೆ ಮೂರು ನಿಮಿಷದ ಸಂಭಾಷಣೆ ಕೊಡುತ್ತೇನೆ:

"ಗೊತ್ತಾಯ್ತೋ ನಾ ಹೇಳಿದ್ದು ನಿಮಗೆ, ನೋಡಿ.

'ರಾಯರೇ, ಏಳನೇ ಮನೆಯಲ್ಲಿ ಗುರು ಬಲವಂತನಾಗಿ ವಕ್ರೀ ಪ್ರವರ್ತಿಯಾಗಿ ಕೂತಿದ್ದಾನೆ. ಅಂದರೆ, ಬಲಶಾಲಿಯಾದ ಹಣವಂತಳಾದ ಮಂಗಳವತಿಯಾದ ಭಾರ್ಯೆ ದೊರೆಯಲೇ ಬೇಕು. ಅಲ್ಲದೆ, ಆಕೆಯಿಂದ ನಿಮಗೆ ಬಹಳೇ ಒಳ್ಳೆಯದಾಗಬೇಕು.

[ಸುಬ್ಬಯ್ಯನ ಭಾರ್ಯೆಯು ಶಾಲಾಮಾಸ್ತರ ಮಗಳು ಅಂದರೆ ಅವಳ ಆರ್ಥಿಕ ಸ್ಥಿತಿ ಕೇಳಬೇಕೆ.]

ಗೊತ್ತಾಯ್ತೋ ನಾ ಹೇಳಿದ್ದು.

ಅಲ್ಲದೆ, ಐದನೆ ಮನೆಯಲ್ಲಿ, ಕುಜ ಉಚ್ಚನಾಗಿ ಶನಿಯೊಡನೆ ಅವನ ಸ್ವಕ್ಷೇತ್ರದಲ್ಲಿ ಇದ್ದಾನೆ. ಅಲ್ಲದೆ ಗುರು ವೀಕ್ಷಣೆ ಇದೆ. ಅಂದರೆ ಪೂರ್ವಜನ್ಮ ಸಂಸ್ಕಾರ ಪುಣ್ಯಗಳು ಯಥೇಚ್ಛವಾಗಿರಬೇಕು. ನೀವು ದೇವರ ಗುಡಿಗೆ ಹೋಗದಿದ್ದರೂ ದೇವರೇ ನಿಮ್ಮ ಮನೆಗೆ ಬಂದು ವರ ಕೊಡುತ್ತಾನೆ.

ಗೊತ್ತಾಯ್ತೋ ನಾ ಹೇಳಿದ್ದು—

[ನನಗೆ ತಿಳಿದ ಮಟ್ಟಿಗೆ ಸುಬ್ಬಯ್ಯನ ಮನೆಗೆ ಬಂದ ದೇವರು ಜ್ಯೋತಿಷ್ಯ ದೇವರೇ— ವರಾಹಮಿಹಿರನ ಕುಮಾರಸ್ವಾಮಿಯೇ— ಬೃಹಜ್ಜಾತಕದಂತೆ ಭಾರ ವಾದವನೇ]

ಅಲ್ಲದೆ ರವಿಯು ರಾಹು ಸಮೇತ ಹತ್ತನೆಯ ಮನೆಯಲ್ಲಿ ಕರ್ಮಸ್ಥಾನದಲ್ಲಿ, ದಶಮ ಕೇಂದ್ರದಲ್ಲಿ ಸ್ವಗೃಹದಲ್ಲಿ ಕುಳಿತೇ ಇದ್ದಾನೆ. ಅಂದಮೇಲೆ ರಾಹು ರವಿಗಳ ದೆಶೆಯಲ್ಲಿ ನಿಮ್ಮ ಕರ್ಮಭಾಗ್ಯವು ರಾಜಯೋಗವಾದೀತು.

'ಗೊತ್ತಾಯ್ತೋ ನಾ ಹೇಳಿದ್ದು'

[ಸುಬ್ಬಯ್ಯನು ಈಗ ಊರಾಚೆ ಇರುವ ಸೌದೆ ಡಿಪೋವಿಗೆ ಮೇಲಧಿಕಾರಿ ಯಾಗಿದ್ದಾನೆ. ಈಗ ಅವನಿಗೆ ರಾಹುದೆಶೆ, ಇನ್ನು ಹದಿನೆಂಟು ವರ್ಷ]

ಈ ರೀತಿ ಸಂಭಾಷಣೆ.

'ಗೊತ್ತಾಯ್ತೋ ನಾ ಹೇಳಿದ್ದು' ನಿಮಗೆ

ಸುಬ್ಬಯ್ಯನಿಗೆ ಸಲಾಮು ಹೊಡೆದು ಹಿಂತಿರುಗಿದೆ ಅನ್ನಿ.

✦ ✦ ✦

ಕಂಗಳೂರಿನ ಪ್ರಾಥಮಿಕಶಾಲೆಯ ಇನ್ಸ್ಪೆಕ್ಷನ್ ಇವತ್ತು. ಅಲ್ಲಿಗೆ ಹೊಸದಾಗಿ ಒಬ್ಬ ಉಪಾಧ್ಯಾಯರು ಬಂದಿದ್ದರು. ಅವರು ಪಾಠ ಹೇಳಿಕೊಡುವುದನ್ನು ನಿರೀಕ್ಷಿಸಿ ನಾನು ಮೇಲಧಿಕಾರಿಗಳಿಗೆ ಬರೆಯಬೇಕಾಗಿತ್ತು. ತರಗತಿಗೆ ಹೋಗಿ ಕುಳಿತೆ. ಭೂಗೋಳದ ಪಾಠ. ಉಪಾಧ್ಯಾಯರು ರುಮಾಲು ಸರಿಮಾಡಿಕೊಂಡು ಗಂಟಲು ಕೆರೆದುಕೊಳ್ಳುತ್ತಾ ಆರಂಭಿಸಿದರು,

ಮೈಸೂರು ಸಂಸ್ಥಾನಕ್ಕೆ ನಾಲ್ಕು ದಿಕ್ಕುಗಳಿವೆ-ಉತ್ತರ ದಕ್ಷಿಣ ಪೂರ್ವ ಪಶ್ಚಿಮ.

ಗೊತ್ತಾಯ್ತೋ ನಾ ಹೇಳಿದ್ದು,

ಉತ್ತರದಲ್ಲಿ ಬೊಂಬಾಯಿ ಮದ್ರಾಸು ಪ್ರಾಂತ್ಯಗಳ ಭಾಗಗಳಿವೆ. ದಕ್ಷಿಣದಲ್ಲಿ ಮದ್ರಾಸಿನ ಇನ್ನೂ ಕೆಲವು ಪ್ರಾಂತ್ಯಗಳಿವೆ. ಪಶ್ಚಿಮದಲ್ಲಿಯೂ ಹಾಗೆಯೇ ಪ್ರಾಂತ್ಯ ಗಳು ಪೂರ್ವದಲ್ಲಿಯೂ ಯಥಾಪ್ರಕಾರ

ಗೊತ್ತಾಯ್ತೋ ನಾ ಹೇಳಿದ್ದು.

ಎಲ್ಲೋ ಕೇಳಿದ ಹಾಗೆ ನೆನಪು ಇದನ್ನು. ಈ ದೇಶಗಳಿಗೆ ಈ ದಿಕ್ಕುಗಳೇ ಆದರೆ, ದೇಶಕ್ಕೇ ದಿಕ್ಕು ತೋಚದೆ ಇರುವುದು ಹುಡುಗರೆಲ್ಲರೂ ದಿಕ್ಪಾಲಾಗುವರು ಖಂಡಿತ ಎಂದೆನ್ನಿಸಿತು.

ಪಾಠ ಮುಗಿದಮೇಲೆ ವಿಚಾರಿಸಿದೆ—ಸುಬ್ಬಯ್ಯನ ಜ್ಯೋತಿಷಿಯೇ ಇಂದು ಇಲ್ಲಿ ನವ ಉಪಾಧ್ಯಾಯ.

ಹೆಚ್ಚು ದಿವಸ ಇವನು ಉಪಾಧ್ಯಾಯನಾಗಿರುವುದಿಲ್ಲ, ಎಂದುಕೊಂಡೆ.

✤ ✤ ✤

ಇಂದು ಪ್ರಜೆಗಳ ಸಭೆ-ಮಂತ್ರಿ ಪಟ್ಟಕ್ಕೆ ಉಮೇದುವಾರರಾಗಬಹುದಾದವರು ಜನ ಪ್ರತಿನಿಧಿಗಳ ಸಭೆಯಲ್ಲಿ ತಾವು ತಾವು ಮಾಡಬೇಕೆಂದಿರುವ ಮೆಹನತ್ತುಗಳನ್ನೂ ವಿಧಾನಗಳನ್ನೂ ವಿವರಿಸಿ ಜನರ ನಂಬುಗೆ ಆಳಧಿಕಾರಿಗಳ ವಿಶ್ವಾಸ ಗಿಟ್ಟಿಸಬೇಕಾದ ಸಭೆ. ಅಂದರೆ ಭಾಷಣಕಾರರೆಲ್ಲಾ ಹುಮ್ಮಸ್ಸಿನಿಂದ, ತಯಾರಾಗಿ ಬಂದು ಮಾತನಾಡುವವರು. ಏನೋ ಸೋಜಿಗ ಇರುತ್ತೆ ಎಂದು ನಾನೂ ಹೋದೆ. ನನ್ನ ಕೆಲಸಕ್ಕೆ ಯಾರು ಮಂತ್ರಿಯಾದರೇನು. ಮಂತ್ರಿಶ್ರೇಷ್ಠನಾದರೇನು, ಮಂತ್ರಿ ಮಧ್ಯಮನಾದರೇನು. ಮಂತ್ರಾಧಮನಾದರೇನು ಎಲ್ಲವೂ ಒಂದೆ. ನಾನು ಶಾಲಾ ಇನ್‌ಸ್ಪೆಕ್ಟರು. ಆದರೂ ಸಿನಿಮಾಗೆ, ಸರ್ಕಸ್ಸಿಗೆ ಹೋಗುವ ಬದಲು ಇಲ್ಲೇ ಹೋಗಿ ಕಾಸು ಖರ್ಚಿಲ್ಲದೆ ನಕ್ಕು ಬರೋಣ ಎಂದು ಈ ಚುನಾವಣಾ ಸಭೆಗೆ ಹೋದೆ.

ಜನ ಕಿಕ್ಕಿರಿದು ತುಂಬಿತ್ತು, ಒಂದೊಂದು ಗುಂಪಿನಲ್ಲಿಯೂ ಒಂದೊಂದು ಜನಾಂಗದವರು. ಒಬ್ಬ ಭಾಷಣಕಾರನು ಎದ್ದನೆಂದರೆ ಒಂದು ಗುಂಪಿನಿಂದ ಕರತಾಡನ, ಇನ್ನೊಂದು ಗುಂಪಿನಿಂದ ಕೇಕೇ ಶಬ್ದ, ಇದು ಪರಸ್ಪರ ಅನ್ನಿ—ಆದರೆ ನಾನು ಹೋದ ಮೂರು ನಿಮಿಷದಲ್ಲಿ ಒಬ್ಬ ಪ್ರಚಂಡವ್ಯಕ್ತಿ ಉಮೇದುವಾರನು ಎದ್ದ-

ಸಭಿಕರೇ— ಸೋದರರೇ ಸೋದರಿಯರೇ— ಇಂದು ನಾನು ನಿಮ್ಮೆದುರಿಗೆ ದೇಶಸೇವೆ, ಈಶಸೇವೆ ಮಾಡಲು, ಮಂತ್ರಿಪದವಿಗೆ ಉಮೇದುವಾರನಾಗಿ, ನನ್ನ ಪ್ರೀತಿ ಮಿತ್ರರ ಒತ್ತಾಯದ ಮೇರೆಗೆ ನಿಂತಿದ್ದೇನೆ. ನಮ್ಮ ದೇಶಕ್ಕೆ ಈಗ ಗುರುವು ಏಳನೆಯ ಮನೆಯಲ್ಲಿದ್ದಾನೆ. ನನಗೂ ಹಾಗೆಯೇ— ರವಿ ರಾಹುಗಳು ಕೇಂದ್ರಸ್ಥಾನದಲ್ಲಿ ಕರ್ಮಭಾವದಲ್ಲಿದ್ದಾರೆ— ನನಗೂ ಹಾಗೆಯೇ

ಗೊತ್ತಾಯ್ತೇ ನಾ ಹೇಳಿದ್ದು—

ಹಾಗೆಯೇ ಚಂದ್ರನು ಆರರಲ್ಲಿ ಅಸ್ತಂಗತನಾಗಿದ್ದಾನೆ— ನನ್ನಂತೆಯೇ— ಕುಜನು ಉಚ್ಚ ಬಲಿಷ್ಟ—ನನಗೂ ಹಾಗೆಯೇ—

ಗೊತ್ತಾಯ್ತೇ ನಾ ಹೇಳಿದ್ದು

ಅಂದಮೇಲೆ ನಕ್ಷತ್ರಗಳೇ ನಮಗೆ ದಾರಿ ಸೂಚಿಸುವುವು. ನಮ್ಮ ದೇಶದ ಜಾತಕವೂ ನನ್ನ ಜಾತಕವೂ ಒಂದೇ. ಹಾಗಂದಮೇಲೆ, ನಾನಲ್ಲದೆ ಇನ್ನಾರು ಅರ್ಹರು ಈ ಪಟ್ಟಕ್ಕೆ - ನನ್ನ ಪುರೋಭಿವೃದ್ಧಿಯೇ ಪುರದ ಅಭಿವೃದ್ಧಿ - ಪುರದ ಅಭಿವೃದ್ಧಿಯೇ ನನ್ನ ಅಭಿವೃದ್ಧಿ.

ಗೊತ್ತಾಯ್ತೇ ನಾ ಹೇಳಿದ್ದು.

ಅಲ್ಲದೆ - ನಮ್ಮ ದೇಶವು ಈಗ ತುಕಡ ತುಕಡ ಆಗಿದೆ. ಅಖಿಲ ಪ್ರಾಂತ್ಯಗಳ ಏಕೀಕರಣ ಮಾಡುವುದೇ ನನ್ನ ಹೆಬ್ಬಯಕೆ, ನಾನು ಕೆಲಕಾಲ ಭೂಗೋಳ ಪಾಠ ವನ್ನು ಕಲಿಸುತ್ತಿದ್ದೆ. ಆಗ ಇದೆಲ್ಲ ವಿಷಯವನ್ನೂ ಸಾಂಗವಾಗಿ ವ್ಯಾಸಂಗಿಸಿದೆ. ಆ ಓದಿನ ಹಿನ್ನೆಲೆಯಿಂದ ಹೇಳುತ್ತಿದ್ದೇನೆ.

ಗೊತ್ತಾಯ್ತೇ ನಾ ಹೇಳಿದ್ದು.

ಕೊಡಗು, ಮಂಗಳೂರು, ಧಾರ್ವಾಡ, ಷಹರು ಎಲ್ಲವನ್ನೂ ನಮ್ಮ ದೇಶದ ಆವರಣದಲ್ಲೇ ಸೇರಿಸಿ, ನಾವೆಲ್ಲರೂ ಒಬ್ಬ ತಾಯಿ ಮಕ್ಕಳೆನಿಸಿ ಒಂದೇ ಸಂಸಾರ ದವರೆನಿಸಿ, ಜಯಭೇರಿ ಹೊಡಿಸುವುದೇ ನನ್ನ ಗುರಿ— ದಾಯಾದತನವಿದ್ದರೂ ಒಂದೇ ಮನೆಯಲ್ಲಿರಲೆಂದು ನನ್ನ ಇಷ್ಟ

ಗೊತ್ತಾಯ್ತೇ ನಾ ಹೇಳಿದ್ದು.

ಸಭೆಯ ಎಲ್ಲಾ ಪಂಗಡಗಳಿಂದಲೂ ಕರತಾಡನ ಆರಂಭವಾಯ್ತು. ನನಗೆ ಆಶ್ಚರ್ಯ, ನಮ್ಮ ಹಳೇ ಚಿರಪರಿಚಿತ ಹುಲಿ, ಇವನಿಗೆ ಇಷ್ಟು ಬೆಂಬಲವೇ ಎಂದು. ಹಾಗೂ ಇವನು ಕಾರ್ಯ ಸಾರ್ಥಕತೆಯನ್ನು ಪಡೆದರೆ, ಮಂತ್ರಿಯಾಗೇ ಬಿಟ್ಟರೆ ಇವನ ಕೆಲಸಕ್ಕೆ ಊನವಾದ ನನ್ನ ಹಣೇಬರಹ ಹೇಗೋ ಎನ್ನಿಸಿತು, ಇರಲಿ ನೋಡೋಣ ಎಂದು ಹತ್ತಿರಿದ್ದ ನಾಲ್ಕು ಜನರನ್ನು ಕೇಳಿದೆ - ಏನೂ ತಿಳಿಯದವನಹಾಗೆ - ಯಾರ್ರೀ ಈತ. ಏನು ಸುದ್ದಿ ಎಂದು.

ಎಲ್ಲರೂ ಹೇಳಿದ್ದು ಒಂದೇ—“ ಇವನಿಗೇನೂ ಪಂಗಡವೇಇಲ್ಲ ಬೆಂಬಲವೇ ಇಲ್ಲ. ಏನೋ ನಕ್ಷತ್ರ ನೋಡಿ ಮಾತನಾಡುತ್ತಾನೆ. ಬೇಗ ಮುಗಿಸಲಿ ಎಂದು ಎಲ್ಲರೂ ಚಪ್ಪಾಳೆ ತಟ್ಟಿದೆವು ” ಎಂದು.

ಆಳಧಿಕಾರಿಗಳಿಗೆ ಏನು ತೋಚಿತು ಗೊತ್ತೇ — ಇವನಿಗೆ ಯಾವ ಪಕ್ಷದ ವಾತವೂ ಇಲ್ಲ. ಎಲ್ಲರ ಮೆಚ್ಚುಗೆಯನ್ನು ಪಡೆದಿದ್ದಾನೆ. ಒಂದು ಪಂಗಡದ ವರನ್ನು ಚುನಾಯಿಸಿದರೆ ಇನ್ನೊಂದು ಪಂಗಡದವರಿಗೆ ಕೋಪ, ಕ್ರೋಧ, ಮಾತ್ಸರ್ಯ ಇತ್ಯಾದಿ. ಪಕ್ಷಾತೀತನಾದ ಈತನೇ ಸರಿ ಈ ಪಟ್ಟಕ್ಕೆ ಏರಲು, ಇತ್ಯಾದಿ ಇತ್ಯಾದಿ.

ಗೊತ್ತಾಯ್ತೇ ನಾ ಹೇಳಿದ್ದು.

ಆತನಿಗೆ ಆ ಪಟ್ಟ ಬರುವುದನ್ನು ನೋಡಿಕೊಂಡೇ ನಾನು ರಾಜೀನಾಮೆ ಕೊಟ್ಟು.... ಕ್ರಾಫ್ಟಿನಲ್ಲಿ ದಿನಗೂಲಿಗೆ ಸೇರಿಕೊಂಡೆ, ಕೈತೋರಿಸಿ ಯಾಕೆ ಅವಲಕ್ಷಣ ಎನ್ನಿಸಿಕೊಳ್ಳಲಿ, ಕಡೆಯತನಕ ಕಾದು ಏಕೆ ಬೇಸ್ತುಬೀಳಲಿ ಎಂದು.

ಗೊತ್ತಾಯ್ತೇ ನಾ ಹೇಳಿದ್ದು.

ಶಸ್ತ್ರಾಸ್ತ್ರ ಶಾಸನ

———

ಅವನು Sub-Inspector ನಾಗಿ ಕೆಲ ದಿನಗಳಾಗಿದ್ದವು.

ಶುಭ್ರವಾದ ಕೋಟಿನ ಹಿತ್ತಾಳೆಯ ಗುಂಡಿಯನ್ನೂ ಹಾಗೂ ಲಕಲಕ ಹೊಳೆಯುವ ಬೂಟಿನ ಕಡೆಗೆ ನೋಡಿ ಆನಂದದ ಭರದಲ್ಲಿ ಅವನ ಮೂವತ್ತಾರು ಇಂಚಿನದಷ್ಟು ಅಗಲವಿದ್ದ ಎದೆಯು ಉಬ್ಬಿ ಮೂವತ್ತೇಳು ಆಗುತ್ತಿದ್ದಿತು.

೧೯೪೨ನೇಯ ಇಸವಿಯಲ್ಲಿ ಅನೇಕ ಸಾರ್ವಜನಿಕ ಮುಂದಾಳುಗಳು ಅಲ್ಲಲ್ಲಿ ಬಂಡಾಯವೆಬ್ಬಿಸಿ ಪರಾರಿಯಾಗಿದ್ದರು. ಅಂತಹರಲ್ಲೊಬ್ಬರನ್ನು ಹಿಡಿದು ಸರಕಾರದವರಿಗೆ ತಂದು ಒಪ್ಪಿಸುವ ಸಾಹಸದಲ್ಲಿದ್ದನವನು. ಕಾರಣ ಕೂಡಲೇ ಅವನಿಗೆ ಗ್ರೇಡ್ ಸಿಗುವುದಿದ್ದಿತು. ನಂತರ Inspector ಪದವಿ ಕೊನೆಗೆ ಡಿ. ಎಸ್. ಪಿ. ನಂತರ—

ಒಂದು ದಿವಸ ಸಂಧ್ಯಾಕಾಲದ ಸಮಯ. ಅವನು Duty ಯ ಮೇಲಿರುವ ವೇಳೆಯಲ್ಲಿ ಒಂದು ಕತ್ತಲೇ ಓಣಿಯೊಳಗಿಂದ ಕಟ್ಟೀ ರಂಗನು ಬಗಲಲ್ಲಿ ತೂಸಿದ ಹಾಗೂ ಹರಿದ ಧೋತರದಲ್ಲಿ ಯಾವದೋ ಕೆಲವು ಉದ್ದವಾದ ಸಾಮಾನುಗಳನ್ನು ಸುತ್ತಿಕೊಂಡು ಅವಸರವಸರದಿಂದ ಮುನ್ನಡಿಯಿಡುತ್ತಿದ್ದನು.

“ ಯೇ ...ಯೇ ...ಯಾರವರು? ” Sub-Inspector ರು ಎಚ್ಚರಗೊಂಡು ಕೂಗಿದರು.

“ ನಾ....ನಾ....ನಾನು.... ರ... ರ....ರಂಗ ” ಅವನು ಸುಧಾರಿಸಿಕೊಂಡು ಉಗುಳು ನುಂಗುತ್ತ ಹೇಳಿದನು.

“ ಎಲ್ಲಿಗೆ ಹೊರಟಿರುವೆ. ..? ಹಾಗು ಇವೇನು ? ” ಕೈಯಲ್ಲಿಯ ಚಿಕ್ಕದಾದ ಬಡಿಗೆಯ ಸಹಾಯದಿಂದ ಅವನ ಬಗಲೊಳಗಿನ ಸಾಮಾನಿನ ಕಡೆಗೆ ಕೈತೋರಿಸುತ್ತಾ ಸಾಹೇಬರು ಕೇಳಿದರು.

“ ಇವು ನನ್ನ ಆಯುಧಗಳು.... ಈ ದಿನ ಇಡೀರಾತ್ರಿ ಈ ಆಯುಧಗಳಿಂದ ಕೆಲಸ ಮಾಡುವದಿದ ನನ್ನನ್ನು ಹೋಗಬಿಡಿ ಹೊತ್ತಾಗುವದು ರಾವಸಾಹೇಬ. ” ರಂಗನು ಅಂಜುತ್ತ ಅಂಜುತ್ತ ಅಂಗಲಾಚಿ ಬೇಡಿಕೊಂಡನು.

Sub-Inspector ರ ಕಣ್ಣು ಮುಂದೆ ಶಸ್ತ್ರಾಸ್ತ್ರ ಕಾನೂನು ಬಂದು ನಿಂತಿತು. ಅಲ್ಲದೆ ಒಬ್ಬ ಕ್ರಾಂತಿ ಕಾರಕ ಖಟ್ಲೆಯ ವಿಚಾರ ಅಂದೇ ಪತ್ರಿಕೆಯಲ್ಲಿ

ಓದಿದ್ದರು. ಕ್ಷಣ ಹೊತ್ತಿನಲ್ಲಿಯೇ ಅವರ ಮೈಯೆಲ್ಲವೂ ಬೆವರಿತು. ಅವರು ನಡುಗಲಾರಂಭಿಸಿದರು.

"ಅಬ್ಬ! ಎಂತಹ ಅದ್ಭುತ ಮನುಷ್ಯನಿವ?" ಎಂಬ ಉದ್ಗಾರ ಅವರ ಬಾಯಿ ಯಿಂದ ತಾನೇ ತಾನಾಗಿ ಹೊರಬಿದ್ದಿತು.

ಸ್ವಲ್ಪ ಧೈರ್ಯ ತಂದುಕೊಂಡು ನುಡಿದರು.—

"ಏ ಬದ್ಮಾಷ್! ನನ್ನೊಡನೆ ನಡೆ."

"ಎಲ್ಲಿಗೆ?" ರಂಗನು ಆಶ್ಚರ್ಯದಿಂದ ಕೇಳಿದನು.

"ನಿನ್ನಪ್ಪನ ಬಳಿ."

"ಸಾಹೇಬ! ಸಧ್ಯ ಅವನು ಸ್ವರ್ಗದಲ್ಲಿರುವನು" ವಿನಯ ಪೂರ್ವಕವಾಗಿ ಹೇಳಿದನು ರಂಗ.

"ಹಾಗಾದರೆ! ನಿನಗೂ ಅಲ್ಲಿಗೆ ಕಳುಹುವೆ."

ಅಂತೂ Sub-Inspector ರು ಅವನನ್ನು ನೂಕುತ್ತ ಚಾವಡಿಯೊಳಗೆ ಕರೆದುಕೊಂಡು ಹೋದರು.

"ಜಮೇದಾರ್ ಈ ಕಳ್ಳನನ್ನು ನಿಮ್ಮ ವಶಕ್ಕೆ ತೆಗೆದುಕೊಳ್ಳಿ. ಬದ್ಮಾಷ್ ಯಾರ ಅಂಜಿಕೆಯೂ ಇಲ್ಲದೆ ನಡು ಶಸ್ತೆಯೊಳಗಿಂದ ಆಯುಧಗಳನ್ನು ತೆಗೆದುಕೊಂಡು ಹೊರಟಿರುವನು. ಲಾಯಸನ್ಸ್ ಇದೆಯೋ ನಿನ್ನ ಬಳಿ.?" Sub-Inspector ರು ಸ್ವಲ್ಪ ಧೈರ್ಯದಿಂದ ಹಣೆಯ ಬೆವರ್ಹನಿಗಳನ್ನು ಒರಸಿಕೊಳ್ಳುತ್ತಾ ಗಟ್ಟಿಯಾಗಿ ಕೇಳಿದರು.

ಜಮೇದಾರನಿಂದ ರಂಗನ ಕಪಾಳ ಮೋಕ್ಷವಾಯಿತು.

"ನೋಡುವ ತೆಗೆ ಯಾವ ಆಯುಧಗಳಿವೆಯೆಂಬುದನ್ನು? ಉಳಿದವುಗಳು ಎಲ್ಲಿವೆ?" ಜಮೇದಾರನು ಪ್ರಶ್ನಿಸಿದನು.

ಬಾಕೀವು ಎರಡನೆಯ ಗುಂಪಿನವರ ಹತ್ತಿರ ಅವರೀ s - ಅವರು ಹಿಂದಿನಿಂದ ಬರಲಿಕ್ಕೆ ಹತ್ತ್ಯಾರ್ರೀ s - ಇವು ಜರೂರಿ ಇದ್ದ ಕಾರಣ ಒಯ್ತಾ ಇದ್ದೀನರಿ."

"ಆ ಗಂಟು ಬಿಚ್ಚು ಅದರ ಪಂಚನಾಮೆ ಮಾಡಬೇಕಾಗಿದೆ."

"ನನ್ನ ಗೋಳ್ಯಾಕ ಹೊಯ್ಕೋತೀರಿ, ಬಿಡ್ರಿ ರಾವಸಾಹೇಬ. ನನ್ನ ಹೊಟ್ಟಿ ಸಾಕೋದೇ ಇದರ ಮ್ಯಾಲರೀ. ಬಹಳೇ ಊರುಗಳನ್ನು ಅಡ್ಡಾಡಿ ಈ ಹೈದ್ರಾಬಾದು ಶಾರಕ್ಕೆ ಬಂದೀನ್ರಿರ.... ಹೊಸದಾಗಿಯೇ ಈಧಂದೆಯೊಳಗ ಬಿದ್ದೀನ್ರೀ....ಸೊನ್ನಿ

ಆಚಾರ್ರು ನಮ್ಮ ಗುರುಗೋಳ್ರೀ. ಇನ್ನೂ ಬೇಷಾಗಿ ಎಲ್ಲಾ ನು ಮಾಡ್ಲಿಕ್ಕೆ ಬರುದಿಲ್ಲರೀ ...... ಇನ್ನೂ Probationer ಇದ್ದೀನರೀ... ಹೀಗೆ ಯಾರಾದರೂ ಬರಲಿಲ್ಲ ಅಂದರ ಅವರ್‍ಬದಲು ನಾ ಕೆಲಸ ಮಾಡ್ತೀನರೀ "

"ಏ ಬೇವಕೂಫ್ ! ಆ ಗಂಟನ್ನು ಮೊದಲು ಬಿಚ್ಚಿ ತೋರಿಸು. ಹೆಚ್ಚಿಗೆ ಬೊಗಳಬೇಡ." ಜಮೇದಾರನು ಗದ್ದರಿಸಿದನು.

ಅವನು ಗಂಟನ್ನು ಬಿಚ್ಚ ತೊಡಗಿದನು—

ಒಳಗೆ ನಡೆದ ಗದ್ದಲದ ಪರಿಣಾಮದಿಂದ ಹೊರಗೆ ಬಹಳೇ ಜನರು ನೆರೆದಿದ್ದರು ತಪ್ಪಿಸಿಕೊಂಡು ಪರಾರಿಯಾದ ಕ್ರಾಂತಿ ಕಾರನೊಬ್ಬನನ್ನು ಪೋಲೀಸಿನವರು ಹಿಡಿದಿರುವರೆಂಬ ಸುದ್ದಿ ಹಾ-ಹಾ-ಅನ್ನುವುದರಲ್ಲಿ ಹೈದರಾಬಾದಿನಲ್ಲೆಲ್ಲ ಹರಡಿತು. ಅಲ್ಲಿಯ ಸುದ್ದಿಯನ್ನು ಬರೆದುಕೊಳ್ಳಲು Un Associated Press ನಿಂದ ಒಬ್ಬ ಬಾತ್ಮೀದಾರನು ಛಾಯಾಗ್ರಾಹಕನೊಂದಿಗೆ ಬಂದಿಳಿದನು.

Sub-Inspector ತಮಗೆ ಕೂಡಲೇ ತಾವು ಪಟ್ಟ ಪ್ರಯಾಸಕ್ಕೆ ಗ್ರೇಡ್ ಸಿಗುವುದೆಂಬ ಸಂತೋಷದಿಂದ, ಒಳ್ಳೆಯ ಪೋತ್ರೆಯಿಂದ ಟೊಂಕದ ಮೇಲೆ ಕೈ ಇಟ್ಟುಕೊಂಡು ನಿಂತಿದ್ದರು.

ಒಳಗೆ ಝಳಪಿಸುವ ಹರಿತವಾದ ತಲ್ವಾರವಿದೆಯೋ ಮೇಣ್ ಭಾರವಾದ ಜನರ ಹೃದಯವನ್ನು ನದ್ದಿನಿಂದ ಭೇದಿಸುವ ಬಂದೂಕವಿದೆಯೋ ಎಂದು ನೋಡಲು ಜನ ಸಂದಣಿಯು ಕಿಕ್ಕಿರಿದು ಉತ್ಸುಕತೆಯಿಂದ ಕಣ್ಣು ಅಗಲವಾಗಿ ತೆಗೆದು ರೆಪ್ಪೆ ಸಹ ಬಡಿಯದೆ ನಿಂತಿದ್ದಿತು. ಛಾಯಾಗ್ರಾಹನು ಸುಸಜ್ಜಿತನಾಗಿ ನಿಂತಿದ್ದನು.

ಬಾತ್ಮೀದಾರನು ಕಾಗದ ಸಪ್ಪಳ ಮಾಡುತ್ತಾ ಅಲ್ಲಲ್ಲಿ ಓಡಾಡುತ್ತಾ ಟಿಪ್ಪಣಿ ಮಾಡಿಕೊಳ್ಳುತ್ತಿದ್ದನು.

ಏನು ಅರಿಯದ ರಂಗ ಪೆಂಗನಂತೆ ಗಂಟನ್ನು ಬಿಚ್ಚತೊಡಗಿದನು. ಒಳಗಿನಿಂದ ಅಡಿಗೆ ಮಾಡುವ ಸಾಮಾನು—ಎರಡು ಭಾರಿ ಸೌಟು, ಒಂದು ಕಬ್ಬಿಣದ ಸೌಟು, ಎರಡು ಖಡಚಿ, ಒಂದು ಲಟ್ಟಣಿಗೆ ಹೊರಗೆ ಬಂದವು.

ಎಸ್ ವೆಂಕಟೇಶ

—o—

"ಇಂಡಿಯಾ ವಿಷಯವಾಗಿ ಬ್ರಿಟಿಷ್ ರಾಜಕೀಯ ಪಕ್ಷಗಳು ತಮ್ಮ ತಮ್ಮಲ್ಲಿ ಹೊಡೆದಾಡಕೂಡದು".. ಇತ್ಯಮೆರಿಃ... "ನಾನು ಇಂಡಿಯನ್ ರಾಜಕೀಯ ಪಕ್ಷಗಳನ್ನೇ ತಮ್ಮ ತಮ್ಮಲ್ಲಿ ಹೊಡೆದಾಡಿಸುತ್ತೇನೆ".... ಇತಿಸಂಪೂರ್ಣಂ.

ನಿಮ್ಮನ್ನು ಆಶ್ಚರ್ಯಗೊಳಿಸುವ ಮಹತ್ತರ ದೃಶ್ಯಪ್ರದರ್ಶನ

ಸಾರಥಿಯವರ ದೃಶ್ಯವೆಂದರೆ

ಉತ್ತಮ ದರ್ಜೆಯ ದೃಶ್ಯವೆಂದೆ

"ಮಾಯಾ ಲೋಕಂ"

ಭೂಮಿಕೆ

ಆಂಧ್ರದೇಶದ ಸುಪ್ರಸಿದ್ಧ
ನಟೀನಟರ ಸಮೂಹ

ಕನ್ನಾಂಬ,
ಸಿ. ಎಸ್. ಆರ್.
ಆಂಜನೇಯುಲು,
ಕಮಲಾ ಕೋಟ್ನಿಸ್,
ಜಿ. ವಿ. ಸುಬ್ಬರಾವ್,
ಬೆಜವಾಡ ರಾಜರತ್ನಂ,



ಲಂಕಾ ಸತ್ಯಂ, ಸುಪ್ರಸಿದ್ಧ ಕನ್ನಡ ತಾರೆ ಎಂ. ವಿ. ರಾಜಮ್ಮ

ಇವರೇ ಮೊದಲಾದವರು ನಟಿಸಿರುವರು

—o—

ಪ್ರೊಡ್ಯೂಸರ್ ಮತ್ತು ಚಿತ್ರ ನಿರ್ದೇಶಕರು :

ಜಿ. ರಾಮಬ್ರಹ್ಮಂ

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ

—o—

ಬೆಂಗಾಲ್ ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ

Printed by B. S Iyengar, Bangalore City